<u>ಉದ್ದೇಶಿತ ತಿದ್ದುಪಡಿಯ ಕರಡು ಪ್ರತಿ</u>

# ಕನ್ನಡ ಸಾಹಿತ್ಯ ಪರಿಷತ್ತು (ನೋಂದಾಯಿತ)

**ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮**

ಸ್ಥಾಪನೆ ೧೯೧೫

ಇದರ

## ಧ್ಯೇಯೋದ್ದೇಶಗಳು (ಜ್ಞಾಪನಪತ್ರ)

| ಹಾಲಿ ಇರುವ ಧ್ಯೇಯೋದ್ದೇಶಗಳು | ಪ್ರಸ್ತಾಪಿತ ತಿದ್ದುಪಡಿ |
|---|---|
| ೪. ಪರಿಷತ್ತಿನ ಧ್ಯೇಯೋದ್ದೇಶಗಳು : | ೪. ಪರಿಷತ್ತಿನ ಧ್ಯೇಯೋದ್ದೇಶಗಳು : |
| (೨) ಪರಿಷತ್ತಿನ ಧ್ಯೇಯೋದ್ದೇಶಗಳ ಸಾಧನೆಗೆ ಪರಿಷತ್ತು ಈ ಕೆಳಗೆ ಕಾಣಿಸಿರುವ ಕಾರ್ಯಕಲಾಪಗಳನ್ನು ಕೈಗೊಳ್ಳತಕ್ಕದ್ದು: | (೨) ಪರಿಷತ್ತಿನ ಧ್ಯೇಯೋದ್ದೇಶಗಳ ಸಾಧನೆಗೆ ಪರಿಷತ್ತು ಈ ಕೆಳಗೆ ಕಾಣಿಸಿರುವ ಕಾರ್ಯಕಲಾಪಗಳನ್ನು ಕೈಗೊಳ್ಳತಕ್ಕದ್ದು: |
| (ಐ) ವಿಶ್ವವಿದ್ಯಾಲಯ ಹಾಗೂ ಮಹಾವಿದ್ಯಾಲಯಗಳಲ್ಲಿ ೧೮ ರಿಂದ ೩೫ ವರ್ಷದೊಳಗಿನ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಹಾಗೂ ಇನ್ನಿತರ ಯುವಕ, ಯುವತಿಯರು ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹಿಸುವ ಕಾರ್ಯಕ್ರಮಗಳನ್ನು ರೂಪಿಸುವುದು. ಈ ಸಂಬಂಧ ಜಿಲ್ಲಾ, ತಾಲ್ಲೂಕು, ಹೋಬಳಿ, ಗಡಿನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ <u>[ಮತ್ತು ಹೊರದೇಶಗಳ]</u> ಘಟಕಗಳಲ್ಲಿ ಅಭಿಯಾನ ಕೈಗೊಳ್ಳುವುದು. | (ಐ) ವಿಶ್ವವಿದ್ಯಾಲಯ ಹಾಗೂ ಮಹಾವಿದ್ಯಾಲಯಗಳಲ್ಲಿ ೧೮ ರಿಂದ ೩೫ ವರ್ಷದೊಳಗಿನ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಹಾಗೂ ಇನ್ನಿತರ ಯುವಕ, ಯುವತಿಯರು ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹಿಸುವ ಕಾರ್ಯಕ್ರಮಗಳನ್ನು ರೂಪಿಸುವುದು. ಈ ಸಂಬಂಧ ಜಿಲ್ಲಾ, ತಾಲ್ಲೂಕು, ಹೋಬಳಿ, ಗಡಿನಾಡು/ರಾಜ್ಯ, ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳಲ್ಲಿ <u>*[ಹಾಗೂ ವಿದೇಶಗಳಲ್ಲಿ]*</u> ಅಭಿಯಾನ ಕೈಗೊಳ್ಳುವುದು. |
| (೪) ಕನ್ನಡ ಶಾಲೆಗಳ ಪುನಃಶ್ಚೇತನ : ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಗುಣಮಟ್ಟದ ಶಿಕ್ಷಣ ಕೊಡುವ ಸ್ಥಿತಿಯಲ್ಲಿಲ್ಲದ ಕನ್ನಡ ಶಾಲೆಗಳನ್ನು ಗುರುತಿಸಿ, ಅವುಗಳ ಪುನಃಶ್ಚೇತನಕ್ಕೆ ಅವಶ್ಯವೆನಿಸಿದಲ್ಲಿ <u>[ಸರ್ಕಾರ]</u> ಹಾಗೂ ಸಂಘ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಶ್ರಮಿಸುವುದು. | (೪) ಕನ್ನಡ ಶಾಲೆಗಳ ಪುನಃಶ್ಚೇತನ : ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಗುಣಮಟ್ಟದ ಶಿಕ್ಷಣ ಕೊಡುವ ಸ್ಥಿತಿಯಲ್ಲಿಲ್ಲದ ಕನ್ನಡ ಶಾಲೆಗಳನ್ನು ಗುರುತಿಸಿ, ಅವುಗಳ ಪುನಃಶ್ಚೇತನಕ್ಕೆ ಅವಶ್ಯವೆನಿಸಿದಲ್ಲಿ <u>*[ಸರ್ಕಾರವನ್ನು ಒತ್ತಾಯಿಸುವುದು]*</u> ಹಾಗೂ ಸಂಘ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಶ್ರಮಿಸುವುದು. |
| <u>*ನಿಯಮ ೪(೬) ಹೊಸ ಸೇರ್ಪಡೆ*</u> | *(೬)** <u>*ಅಂಗಸಂಸ್ಥೆ: ಪರಿಷತ್ತಿನ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ ಅಸ್ತಿತ್ವದಲ್ಲಿರುವ ಮತ್ತು ಪರಿಷತ್ತಿನ ಧ್ಯೇಯೋದ್ದೇಶಗಳಿಗೆ ಒಳಪಟ್ಟು ತನ್ನ ಕಾರ್ಯಚಟುವಟಿಕೆಗಳನ್ನು ಜರುಗಿಸುವ ಯಾವುದೇ ಕನ್ನಡ ಸಂಘ–ಸಂಸ್ಥೆಯನ್ನು ಪರಿಷತ್ತಿನ ಅಂಗಸಂಸ್ಥೆಯನ್ನಾಗಿ ಪರಿಗಣಿಸಬಹುದು.*</u> |

೧) ನಿಯಮ ಸಂಖ್ಯೆ ೪(೨)(ಐ) ರಲ್ಲಿಯ <u>'ಮತ್ತು ಹೊರದೇಶಗಳ'</u> ಎಂಬ ಪದಗಳನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಕೈಬಿಟ್ಟು, <u>'ಹಾಗೂ ವಿದೇಶಗಳಲ್ಲಿ'</u> ಎಂಬ ಪದಗಳನ್ನು ಸೇರಿಸಲಾಗಿದೆ.

೨) ನಿಯಮ ಸಂಖ್ಯೆ ೪(೬)ನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಹೊಸದಾಗಿ ಸೇರಿಸಲಾಗಿದೆ.

೩) ಪರಿಷತ್ತಿನ ಧ್ಯೇಯೋದ್ದೇಶಗಳು ಹಾಗೂ ನಿಯಮ–ನಿಬಂಧನೆಗಳಲ್ಲಿ ಅಲ್ಲಲ್ಲಿ ಉಳಿಸಿಕೊಂಡಿರುವ <u>'ಹೊರದೇಶ'</u> ಎಂಬ ಪದದ ಬದಲಾಗಿ, <u>'ವಿದೇಶ'</u> ಎಂಬ ಪದವನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಬದಲಾಯಿಸಲಾಗಿದೆ.

# ಕನ್ನಡ ಸಾಹಿತ್ಯ ಪರಿಷತ್ತು (ನೋಂದಾಯಿತ)

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮

ಸ್ಥಾಪನೆ ೧೯೧೫


ಇದರ

## ನಿಯಮ–ನಿಬಂಧನೆಗಳು

### ಹಾಲಿ ಇರುವ ನಿಯಮ–ನಿಬಂಧನೆಗಳು

೫. ವ್ಯಾಖ್ಯಾನಗಳು :

(೨) 'ಪರಿಷತ್ತು' / 'ಕೇಂದ್ರ ಪರಿಷತ್ತು' ಎಂದರೆ ಇಡೀ ಕರ್ನಾಟಕ ರಾಜ್ಯ, ಗಡಿನಾಡು/ರಾಜ್ಯಗಳು, ಹೊರರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು, [ಹೊರದೇಶಗಳು] ಹಾಗೂ ಕಂದಾಯ ವ್ಯಾಪ್ತಿಯಲ್ಲಿರುವ ಜಿಲ್ಲಾ, ತಾಲ್ಲೂಕು, ಹೋಬಳಿ ಮಟ್ಟದ ಘಟಕಗಳನ್ನು ಸೇರಿರತಕ್ಕದ್ದು.

*(೪)* 'ಕೇಂದ್ರ ಕಾರ್ಯಕಾರಿ ಸಮಿತಿ' ಎಂದರೆ ಕೇಂದ್ರ ಪರಿಷತ್ತಿನ ಅಧ್ಯಕ್ಷರಾಗಿ ಚುನಾಯಿತರಾದ ಹಾಗೂ ಜಿಲ್ಲಾ ಘಟಕಗಳ ಅಧ್ಯಕ್ಷರಾಗಿ ಚುನಾಯಿತರಾದ ಮತ್ತು ನಾಮನಿರ್ದೇಶನ ಗೊಂಡ ಸದಸ್ಯರುಗಳನ್ನು ಒಳಗೊಂಡ ಸಮಿತಿ; 'ಜಿಲ್ಲಾ, ತಾಲ್ಲೂಕು, ಹೋಬಳಿ ಮತ್ತು ಗಡಿನಾಡು/ರಾಜ್ಯ ಘಟಕಗಳಿಗೆ' ಸಂಬಂಧಿಸಿದಂತೆ ಆಯಾ ಘಟಕಗಳಿಗೆ ಅಧ್ಯಕ್ಷರಾಗಿ ಚುನಾಯಿತರಾದ ಅಧ್ಯಕ್ಷರುಗಳು ಮತ್ತು ನಾಮನಿರ್ದೇಶನಗೊಂಡ ಸದಸ್ಯರುಗಳನ್ನು ಒಳಗೊಂಡ ಸಮಿತಿ. ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಮತ್ತು ಹೊರದೇಶದ ಘಟಕಗಳಿಗೆ ಸಂಬಂಧಿಸಿದಂತೆ ಕೇಂದ್ರ ಪರಿಷತ್ತಿನಿಂದ ನಾಮ ನಿರ್ದೇಶನಗೊಂಡ ಸದಸ್ಯರುಗಳನ್ನು ಒಳಗೊಂಡ ಸಮಿತಿ.

*[ನಿಯಮ ೫(೪)ನ್ನು ವಿಭಜಿಸಿ ೫(೪) (ಅ) (ಆ) (ಇ) ಎಂಬುದಾಗಿ ಸೇರಿಸಲಾಗಿದೆ]*

### ಪ್ರಸ್ತಾಪಿತ ತಿದ್ದುಪಡಿ

೫. ವ್ಯಾಖ್ಯಾನಗಳು :

*(೨) 'ಪರಿಷತ್ತು' / 'ಕೇಂದ್ರ ಪರಿಷತ್ತು' ಎಂದರೆ ಇಡೀ ಕರ್ನಾಟಕ ರಾಜ್ಯ, ಗಡಿನಾಡು/ರಾಜ್ಯಗಳು, ಹೊರರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಹಾಗೂ ಕಂದಾಯ ವ್ಯಾಪ್ತಿಯಲ್ಲಿರುವ ಜಿಲ್ಲಾ, ತಾಲ್ಲೂಕು, ಹೋಬಳಿ ಮಟ್ಟದ ಘಟಕಗಳನ್ನು ಸೇರಿರತಕ್ಕದ್ದು.*

*(೪)* (ಅ) 'ಕೇಂದ್ರ ಕಾರ್ಯಕಾರಿ ಸಮಿತಿ' ಎಂದರೆ ಕೇಂದ್ರ ಪರಿಷತ್ತಿನ ಅಧ್ಯಕ್ಷರಾಗಿ ಚುನಾಯಿತರಾದ ಹಾಗೂ ಜಿಲ್ಲಾ ಘಟಕಗಳ ಅಧ್ಯಕ್ಷರಾಗಿ ಚುನಾಯಿತರಾದ, ಗಡಿನಾಡು/ರಾಜ್ಯ ಘಟಕಗಳ ಅಧ್ಯಕ್ಷರಾಗಿ ಚುನಾಯಿತರಾದ ಮತ್ತು ನಾಮನಿರ್ದೇಶನಗೊಂಡ ಸದಸ್ಯರುಗಳನ್ನು ಒಳಗೊಂಡ ಸಮಿತಿ.*

*(ಆ) 'ಜಿಲ್ಲಾ, ತಾಲ್ಲೂಕು, ಹೋಬಳಿ ಮತ್ತು ಗಡಿನಾಡು/ರಾಜ್ಯ ಘಟಕಗಳ ಕಾರ್ಯಕಾರಿ ಸಮಿತಿ' ಎಂದರೆ ಆಯಾ ಘಟಕಗಳಿಗೆ ಅಧ್ಯಕ್ಷರಾಗಿ ಚುನಾಯಿತರಾದ ಅಧ್ಯಕ್ಷರುಗಳು ಮತ್ತು ನಾಮನಿರ್ದೇಶನಗೊಂಡ ಸದಸ್ಯರುಗಳನ್ನು ಒಳಗೊಂಡ ಸಮಿತಿ.*

*(ಇ) ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳ ಕಾರ್ಯಕಾರಿ ಸಮಿತಿ ಎಂದರೆ ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳಿಗೆ ಕೇಂದ್ರ ಪರಿಷತ್ತಿನಿಂದ ನಾಮ ನಿರ್ದೇಶನಗೊಂಡ ಸದಸ್ಯರುಗಳನ್ನು ಒಳಗೊಂಡ ಸಮಿತಿ.*

---

೧) ನಿಯಮ ಸಂಖ್ಯೆ ೫(೨) ರಲ್ಲಿಯ 'ಹೊರದೇಶಗಳು', ೫(೪)(ಇ) ರಲ್ಲಿಯ 'ಮತ್ತು ಹೊರದೇಶದ' ಎಂಬ ಪದಗಳನ್ನು ೨೦೨೩ರ ತಿದ್ದುಪಡಿಯ ಮೂಲಕ ಕೈಬಿಡಲಾಗಿದೆ.

೨) ನಿಯಮ ಸಂಖ್ಯೆ ೫(೪)ನ್ನು ವಿಭಜಿಸಿ ೫(೪) (ಅ) (ಆ) ಮತ್ತು (ಇ) ಎಂಬುದಾಗಿ ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ತಿದ್ದಲಾಗಿದೆ. ಜೊತೆಗೆ ೫(೪)(ಅ)ರಲ್ಲಿ 'ಗಡಿನಾಡು/ರಾಜ್ಯ ಘಟಕಗಳ ಅಧ್ಯಕ್ಷರಾಗಿ ಚುನಾಯಿತರಾದ' ಎಂಬ ಪದಗಳನ್ನು ಸೇರಿಸಲಾಗಿದೆ.

| ಹಾಲಿ ಇರುವ ನಿಯಮ–ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ |
|---|---|
| (೫) ‘ಘಟಕ’ ಎಂದರೆ ಕೇಂದ್ರ ಪರಿಷತ್ತಿನ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ, ತಾಲ್ಲೂಕು, ಹೋಬಳಿ, ಗಡಿ ನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ [ಹಾಗೂ ಹೊರದೇಶ] ಗಳಲ್ಲಿ ಅಸ್ತಿತ್ವದಲ್ಲಿರುವ ಪರಿಷತ್ತಿನ ವಿವಿಧ ಅಂಗಗಳು. | (೫) ‘ಘಟಕ’ ಎಂದರೆ ಕೇಂದ್ರ ಪರಿಷತ್ತಿನ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ, ತಾಲ್ಲೂಕು, ಹೋಬಳಿ, ಗಡಿ ನಾಡು/ರಾಜ್ಯ, ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿರುವ ಪರಿಷತ್ತಿನ ವಿವಿಧ ಅಂಗಗಳು. |
| *ನಿಯಮ ೫(೧೩) ಹೊಸ ಸೇರ್ಪಡೆ* | (೧೩)[*] *‘ಅಂಗಸಂಸ್ಥೆ’ ಎಂದರೆ ಪರಿಷತ್ತಿನ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ ಅಸ್ತಿತ್ವದಲ್ಲಿರುವ ಮತ್ತು ಪರಿಷತ್ತಿನ ಧ್ಯೇಯೋದ್ದೇಶಗಳಿಗೆ ಒಳಪಟ್ಟು ತನ್ನ ಕಾರ್ಯಚಟುವಟಿಕೆಗಳನ್ನು ಜರುಗಿಸುವ ಯಾವುದೇ ಕನ್ನಡ ಸಂಘ–ಸಂಸ್ಥೆಯನ್ನು ಪರಿಷತ್ತಿನ ಅಂಗಸಂಸ್ಥೆಯನ್ನಾಗಿ ಪರಿಗಣಿಸಬಹುದು.* |

೧) ನಿಯಮ ಸಂಖ್ಯೆ ೫(೫) ರಲ್ಲಿಯ ‘ಹಾಗೂ ಹೊರದೇಶ’ ಎಂಬ ಪದಗಳನ್ನು ೨೦೨೩ರ ತಿದ್ದುಪಡಿಯ ಮೂಲಕ ಕೈಬಿಡಲಾಗಿದೆ.

೨) ನಿಯಮ ಸಂಖ್ಯೆ ೫(೧೩) ಅನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಹೊಸದಾಗಿ ಸೇರಿಸಲಾಗಿದೆ.

## ಹಾಲಿ ಇರುವ ನಿಯಮ–ನಿಬಂಧನೆಗಳು

**೬. ಪರಿಷತ್ತಿನ ಸದಸ್ಯತ್ವ :**

**(೨) ಪರಿಷತ್ತಿನ ಸದಸ್ಯರ ವರ್ಗಗಳು, ಅವರು ಸಲ್ಲಿಸಬೇಕಾದ ಶುಲ್ಕ :**

| | | | |
|---|---|---|---|
| (ಅ) ಮಹಾ ಪೋಷಕರು | ರೂ. | ೧,೦೦,೦೦೦/– | (ಒಂದು ಲಕ್ಷ) |
| (ಆ) ಪೋಷಕರು | ರೂ. | ೫೦,೦೦೦/– | (ಐವತ್ತು ಸಾವಿರ) |
| (ಇ) ಆಜೀವ ಸದಸ್ಯರು | ರೂ. | ೨೫೦/– | (ಇನ್ನೂರ ಐವತ್ತು) |
| (ಈ) ಮಹಾ ಪೋಷಕ ಸಂಸ್ಥೆಗಳು | ರೂ. | ೨,೦೦,೦೦೦/– | (ಎರಡು ಲಕ್ಷ) |
| (ಉ) ಪೋಷಕ ಸಂಸ್ಥೆಗಳು | ರೂ. | ೧,೦೦,೦೦೦/– | (ಒಂದು ಲಕ್ಷ) |
| (ಊ) [<u>ಸದಸ್ಯ</u> /] ದಾನಿ ಸಂಸ್ಥೆಗಳು | ರೂ. | ೨೫,೦೦೦/– | (ಇಪ್ಪತ್ತೈದು ಸಾವಿರ) |
| (ಋ) ಯಾವುದೇ ಶಿಕ್ಷಣ ಸಂಸ್ಥೆಗಳಲ್ಲಿ ಅಸ್ತಿತ್ವದಲ್ಲಿ ಇರುವ ಸಂಘ–ಸಂಸ್ಥೆ ರೂ. ೫,೦೦೦/– (ಐದು ಸಾವಿರ) | | | |
| (ಎ) ಭಾರತೀಯ ಸೇನೆ, ಅರೆಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ / ನಿವೃತ್ತರಾಗಿರುವ ಕನ್ನಡ ಸೈನಿಕರಿಗೆ ಹಾಗೂ ದಿವ್ಯಾಂಗಚೇತನರಿಗೆ ಆಜೀವ ಸದಸ್ಯತ್ವವನ್ನು ಮತ್ತು ಸ್ಮಾರ್ಟ್‌ಕಾರ್ಡನ್ನು ಶುಲ್ಕರಹಿತ(ಉಚಿತ)ವಾಗಿ ನೀಡತಕ್ಕದ್ದು. | | | |
| (ಏ) ಹೊರದೇಶದ ಕನ್ನಡಿಗರು ಅಮೆರಿಕದ ಹತ್ತು ಡಾಲರುಗಳಿಗೆ ಸರಿಸಮಾನವಾದ ಭಾರತದ ರೂಪಾಯಿಗಳನ್ನು ಆಜೀವ ಸದಸ್ಯತ್ವದ ಶುಲ್ಕವಾಗಿ ಪಾವತಿಸತಕ್ಕದ್ದು. | | | |

***<u>ನಿಯಮ ೬(೨) (ಐ) ಹೊಸ ಸೇರ್ಪಡೆ</u>***

***<u>ನಿಯಮ ೬(೨) (ಒ) ಹೊಸ ಸೇರ್ಪಡೆ</u>***

## ಪ್ರಸ್ತಾಪಿತ ತಿದ್ದುಪಡಿ

**೬. ಪರಿಷತ್ತಿನ ಸದಸ್ಯತ್ವ :**

**(೨) ಪರಿಷತ್ತಿನ ಸದಸ್ಯರ ವರ್ಗಗಳು, ಅವರು ಸಲ್ಲಿಸಬೇಕಾದ ಶುಲ್ಕ :**

| | | | |
|---|---|---|---|
| (ಅ) ಮಹಾ ಪೋಷಕರು | ರೂ. | ೧,೦೦,೦೦೦/– | (ಒಂದು ಲಕ್ಷ) |
| (ಆ) ಪೋಷಕರು | ರೂ. | ೫೦,೦೦೦/– | (ಐವತ್ತು ಸಾವಿರ) |
| (ಇ) ಆಜೀವ ಸದಸ್ಯರು | ರೂ. | ೨೫೦/– | (ಇನ್ನೂರ ಐವತ್ತು) |
| (ಈ) ಮಹಾ ಪೋಷಕ ಸಂಸ್ಥೆಗಳು | ರೂ. | ೨,೦೦,೦೦೦/– | (ಎರಡು ಲಕ್ಷ) |
| (ಉ) ಪೋಷಕ ಸಂಸ್ಥೆಗಳು | ರೂ. | ೧,೦೦,೦೦೦/– | (ಒಂದು ಲಕ್ಷ) |
| (ಊ) ದಾನಿ ಸಂಸ್ಥೆಗಳು | ರೂ. | ೨೫,೦೦೦/– | (ಇಪ್ಪತ್ತೈದು ಸಾವಿರ) |
| (ಋ) ಯಾವುದೇ ಶಿಕ್ಷಣ ಸಂಸ್ಥೆಗಳಲ್ಲಿ ಅಸ್ತಿತ್ವದಲ್ಲಿ ಇರುವ ಸಂಘ–ಸಂಸ್ಥೆ ರೂ. ೫,೦೦೦/– (ಐದು ಸಾವಿರ) | | | |
| (ಎ) ಭಾರತೀಯ ಸೇನೆ, ಅರೆಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ / ನಿವೃತ್ತರಾಗಿರುವ ಕನ್ನಡ ಸೈನಿಕರಿಗೆ ಹಾಗೂ ದಿವ್ಯಾಂಗಚೇತನರಿಗೆ ಆಜೀವ ಸದಸ್ಯತ್ವವನ್ನು ಮತ್ತು ಸ್ಮಾರ್ಟ್‌ಕಾರ್ಡನ್ನು ಶುಲ್ಕರಹಿತ(ಉಚಿತ)ವಾಗಿ ನೀಡತಕ್ಕದ್ದು. | | | |
| (ಏ) ವಿದೇಶದ ಕನ್ನಡಿಗರು ಅಮೆರಿಕದ ಹತ್ತು ಡಾಲರುಗಳಿಗೆ ಸರಿಸಮಾನವಾದ ಭಾರತದ ರೂಪಾಯಿಗಳನ್ನು ಆಜೀವ ಸದಸ್ಯತ್ವದ ಶುಲ್ಕವಾಗಿ ಪಾವತಿಸತಕ್ಕದ್ದು. | | | |
| *(ಐ)* ** *ಕರ್ನಾಟಕ ರಾಜ್ಯ / ಗಡಿರಾಜ್ಯ / ಹೊರರಾಜ್ಯಗಳಲ್ಲಿರುವ ಯಾವುದೇ ಕನ್ನಡ ಸಂಘ–ಸಂಸ್ಥೆಯು ಪರಿಷತ್ತಿನ ಅಂಗಸಂಸ್ಥೆಯಾಗಲು ರೂ. ೧೦,೦೦೦/– (ಹತ್ತು ಸಾವಿರ ರೂಪಾಯಿ)ಗಳನ್ನು ಶುಲ್ಕವಾಗಿ ಪಾವತಿಸತಕ್ಕದ್ದು.* | | | |
| *(ಒ)* ** *ಯಾವುದೇ ವಿದೇಶದಲ್ಲಿರುವ ಕನ್ನಡ ಸಂಘ–ಸಂಸ್ಥೆಯು ಪರಿಷತ್ತಿನ ಅಂಗಸಂಸ್ಥೆಯಾಗಲು ಬಯಸಿದ್ದಲ್ಲಿ ಅಮೆರಿಕದ ಐವತ್ತು ಡಾಲರುಗಳಿಗೆ ಸರಿಸಮಾನವಾದ ಭಾರತದ ರೂಪಾಯಿಗಳನ್ನು, ಅಥವಾ ಪರಿಷತ್ತಿನ ಕಾರ್ಯಕಾರಿ ಸಮಿತಿ ಆಗಾಗ್ಗೆ ನಿಗದಿಪಡಿಸುವ ಮೊತ್ತವನ್ನು ಶುಲ್ಕವಾಗಿ ಪಾವತಿಸತಕ್ಕದ್ದು.* | | | |

---

೧) ನಿಯಮ ಸಂಖ್ಯೆ ೬(೨)(ಊ)ರಲ್ಲಿ <u>'ಸದಸ್ಯ'</u> ಎಂಬ ಪದವನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಕೈಬಿಡಲಾಗಿದೆ.

೨) ನಿಯಮ ಸಂಖ್ಯೆ ೬(೨)ರಲ್ಲಿ (ಐ) ಮತ್ತು (ಒ) ಉಪ ನಿಯಮಗಳನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಹೊಸದಾಗಿ ಸೇರಿಸಲಾಗಿದೆ.

| ಹಾಲಿ ಇರುವ ನಿಯಮ–ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ |
|---|---|
| ೭. ಸದಸ್ಯತ್ವ ಪಡೆಯುವ ಪ್ರಕ್ರಿಯೆ : (೧)ಸದಸ್ಯತ್ವ ಪಡೆಯಬಯಸುವ ಆಯಾ ವರ್ಗಗಳ ವ್ಯಕ್ತಿಗಳು ಹಾಗೂ ಸಂಸ್ಥೆಗಳು ನೇರವಾಗಿ, ಪರಿಷತ್ತಿನ ಜಾಲತಾಣ (ವೆಬ್‌ಸೈಟ್) / ಮೊಬೈಲ್ ಆ್ಯಪ್ / ಕೇಂದ್ರ ಪರಿಷತ್ತಿನ ಕಚೇರಿಯಲ್ಲಿ ನಿಗದಿ ಪಡಿಸಿರುವ ನಮೂನೆಯಲ್ಲಿ ಅರ್ಜಿಯನ್ನು ಭರ್ತಿಮಾಡಿ, ಅಗತ್ಯ ದಾಖಲೆಗಳನ್ನು ಲಗತ್ತಿಸಿ ಆನ್‌ಲೈನ್ ಮೂಲಕ ಶುಲ್ಕವನ್ನು ಪಾವತಿಸತಕ್ಕದ್ದು. ಇಂತಹ ಅರ್ಜಿಯನ್ನು ಹಾಗೂ ದಾಖಲೆಗಳನ್ನು ಪರಿಷತ್ತು ಪರಿಶೀಲಿಸಿದ ಅನಂತರ ಸದಸ್ಯತ್ವವನ್ನು ನೀಡಲಾಗುವುದು. | ೭. <u>ಸದಸ್ಯತ್ವ ಪಡೆಯುವ ಪ್ರಕ್ರಿಯೆ :</u> (೧)ಸದಸ್ಯತ್ವ ಪಡೆಯಬಯಸುವ ಆಯಾ ವರ್ಗಗಳ ವ್ಯಕ್ತಿಗಳು ಹಾಗೂ ಸಂಸ್ಥೆಗಳು ನೇರವಾಗಿ, ಪರಿಷತ್ತಿನ ಜಾಲತಾಣ (ವೆಬ್‌ಸೈಟ್) / ಮೊಬೈಲ್ ಆ್ಯಪ್ / ಕೇಂದ್ರ ಪರಿಷತ್ತಿನ ಕಚೇರಿಯಲ್ಲಿ ನಿಗದಿ ಪಡಿಸಿರುವ ನಮೂನೆಯಲ್ಲಿ ಅರ್ಜಿಯನ್ನು ಭರ್ತಿಮಾಡಿ, ಅಗತ್ಯ ದಾಖಲೆಗಳನ್ನು ಲಗತ್ತಿಸಿ ಆನ್‌ಲೈನ್ ಮೂಲಕ ಶುಲ್ಕವನ್ನು ಪಾವತಿಸತಕ್ಕದ್ದು. ಇಂತಹ ಅರ್ಜಿಯನ್ನು ಹಾಗೂ ದಾಖಲೆಗಳನ್ನು ಪರಿಷತ್ತು ಪರಿಶೀಲಿಸಿದ ಅನಂತರ ಸದಸ್ಯತ್ವವನ್ನು ನೀಡಲಾಗುವುದು. |
| *<u>ನಿಯಮ ೭(೧)ರಲ್ಲಿ ಉಪನಿಯಮ</u>*<br>*<u>(ಅ) ಮತ್ತು (ಆ)ಗಳನ್ನು ಹೊಸದಾಗಿ ಸೇರಿಸಲಾಗಿದೆ</u>* | *<u>(ಅ)* ಆನ್‌ಲೈನ್ ಮೂಲಕ ಸದಸ್ಯತ್ವ ಪಡೆಯುವವರು ಸದಸ್ಯತ್ವ ಶುಲ್ಕ ಹಾಗೂ ಸ್ಮಾರ್ಟ್‌ಕಾರ್ಡ್ ವೆಚ್ಚದ ಮೊತ್ತದ ಜೊತೆಗೆ, ಪೇಮೆಂಟ್ ಗೇಟ್‌ವೇ ಸಂಸ್ಕರಣಾ ಶುಲ್ಕ ಹಾಗೂ ಜಿ.ಎಸ್.ಟಿ. ಮತ್ತು ಇತರೆ ತೆರಿಗೆ ಸೇರಿದಂತೆ ಪರಿಷತ್ತು ಆಗಾಗ್ಗೆ ನಿಗದಿಪಡಿಸುವ ಮೊತ್ತವನ್ನು ಪಾವತಿಸತಕ್ಕದ್ದು.</u>*<br>*<u>(ಆ)* ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿಮಾಡಿ ಸದಸ್ಯತ್ವ ಶುಲ್ಕವನ್ನು ಪಾವತಿಸಲು ಅನುಕೂಲವಿಲ್ಲದ ವ್ಯಕ್ತಿಗಳು, ಮುದ್ರಿತ ಸದಸ್ಯತ್ವ ಅಪೇಕ್ಷಾ ಪತ್ರಕ್ಕೆ ಪರಿಷತ್ತು ಆಗಾಗ್ಗೆ ನಿಗದಿಪಡಿಸುವ ಶುಲ್ಕವನ್ನು ಪಾವತಿಸಿ, ಮುದ್ರಿತ ಅರ್ಜಿಯನ್ನು ಪಡೆದುಕೊಂಡು ವಿವರಗಳನ್ನು ಭರ್ತಿ ಮಾಡಿ ಸಲ್ಲಿಸಬಹುದಲ್ಲದೆ, ಸದಸ್ಯತ್ವ ಶುಲ್ಕವನ್ನು ನಗದಾಗಿ / ಬ್ಯಾಂಕ್ ಡ್ರಾಫ್ಟ್ / ಮನಿ ಆರ್ಡರ್ ಮೂಲಕ ಪಾವತಿಸಬಹುದು.</u>* |
| (೩) ಈಗಾಗಲೇ ಸದಸ್ಯತ್ವ ಪಡೆದು ಗುರುತಿನ ಚೀಟಿ ಹೊಂದಿದವರು ಅಪೇಕ್ಷೆಪಟ್ಟಲ್ಲಿ ಮಾತ್ರ ಹಾಗೂ ಹೊಸದಾಗಿ ಸದಸ್ಯತ್ವ ಪಡೆಯುವವರು ಆಧುನಿಕ ಗುರುತಿನ ಚೀಟಿ 'ಸ್ಮಾರ್ಟ್‌ಕಾರ್ಡ್'ನ್ನು ಕಡ್ಡಾಯವಾಗಿ ಪಡೆಯತಕ್ಕದ್ದು. ಈ ಸಂಬಂಧ ರೂ. ೧೫೦–೦೦ (ಒಂದುನೂರ ಐವತ್ತು ರೂಪಾಯಿ)ಗಳನ್ನು ಹೆಚ್ಚುವರಿಯಾಗಿ (ಸ್ಮಾಟ್‌ಕಾರ್ಡ್ ವೆಚ್ಚ ಮತ್ತು ಅಂಚೆ ವೆಚ್ಚ ಸೇರಿ) ಪಾವತಿಸಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಈ ಸ್ಮಾರ್ಟ್‌ಕಾರ್ಡ್‌ನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ. | (೩) ಈಗಾಗಲೇ ಸದಸ್ಯತ್ವ ಪಡೆದು ಗುರುತಿನ ಚೀಟಿ ಹೊಂದಿದವರು ಅಪೇಕ್ಷೆಪಟ್ಟಲ್ಲಿ ಮಾತ್ರ ಹಾಗೂ ಹೊಸದಾಗಿ ಸದಸ್ಯತ್ವ ಪಡೆಯುವವರು ಆಧುನಿಕ ಗುರುತಿನ ಚೀಟಿ 'ಸ್ಮಾರ್ಟ್‌ಕಾರ್ಡ್'ನ್ನು ಕಡ್ಡಾಯವಾಗಿ ಪಡೆಯತಕ್ಕದ್ದು. ಈ ಸಂಬಂಧ ರೂ. ೧೫೦–೦೦ (ಒಂದುನೂರ ಐವತ್ತು ರೂಪಾಯಿ)ಗಳನ್ನು ಹೆಚ್ಚುವರಿಯಾಗಿ (ಸ್ಮಾಟ್‌ಕಾರ್ಡ್ ವೆಚ್ಚ ಮತ್ತು ಅಂಚೆ ವೆಚ್ಚ ಸೇರಿ) ಪಾವತಿಸಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಈ ಸ್ಮಾರ್ಟ್‌ಕಾರ್ಡ್‌ನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ. |
| *<u>ನಿಯಮ ೭(೩)ರಲ್ಲಿ ಉಪನಿಯಮ</u>*<br>*<u>(ಅ) ಮತ್ತು (ಆ)ಗಳನ್ನು ಹೊಸದಾಗಿ ಸೇರಿಸಲಾಗಿದೆ</u>* | *<u>(ಅ)* ಈಗಾಗಲೇ ಪರಿಷತ್ತಿನ ಸದಸ್ಯತ್ವವನ್ನು ಹೊಂದಿರುವವರು ಸ್ಮಾರ್ಟ್‌ಕಾರ್ಡ್ ಪಡೆಯಲು ಇಚ್ಛಿಸಿದ್ದಲ್ಲಿ, ಸ್ಮಾರ್ಟ್‌ಕಾರ್ಡ್ ವೆಚ್ಚ ರೂ. ೧೫೦–೦೦ ಗಳೊಂದಿಗೆ ಪೇಮೆಂಟ್ ಗೇಟ್‌ವೇ ಸಂಸ್ಕರಣಾ ಶುಲ್ಕ ಹಾಗೂ ಜಿ.ಎಸ್.ಟಿ. ಮತ್ತು ಇತರೆ ತೆರಿಗೆ ಸೇರಿದಂತೆ ಪರಿಷತ್ತು ಆಗಾಗ್ಗೆ ನಿಗದಿಪಡಿಸುವ ಮೊತ್ತವನ್ನು ಪಾವತಿಸತಕ್ಕದ್ದು.</u>*<br>*<u>(ಆ)* ನಿಯಮ ೭ರ ಉಪನಿಯಮ ೧(ಅ), (ಆ) ಹಾಗೂ ೩(ಅ)ಗಳ ಪೂರ್ವಾನ್ವಯ ಜಾರಿ : ಪ್ರಸ್ತಾಪಿತ ತಿದ್ದುಪಡಿಗಳು ನೋಂದಣಿಗೊಂಡ ನಂತರವೇ ಜಾರಿಗೊಳ್ಳುವುದರಿಂದ, ಪರಿಷತ್ತಿನ ಸದಸ್ಯತ್ವದ ಅಭಿಯಾನವನ್ನು ಪ್ರಾರಂಭಿಸಲು ಅನುಕೂಲವಾಗುವಂತೆ ನಿಯಮ ೭ರ ಈ ಉಪನಿಯಮಗಳು ಪೂರ್ವಾನ್ವಯವಾಗಿ ದಿನಾಂಕ ೧೨–೦೬–೨೦೨೩ ರಿಂದಲೇ ಜಾರಿಗೆ ಬರಲಾಗಿವೆ ಎಂದು ಭಾವಿಸತಕ್ಕದ್ದು.</u>*<br><br>* ನಿಯಮ ಸಂಖ್ಯೆ ೭(೧)ರಲ್ಲಿ (ಅ) ಮತ್ತು (ಆ)ಗಳನ್ನು ಹಾಗೂ ೭(೩)ರಲ್ಲಿ (ಅ) ಮತ್ತು (ಆ)ಗಳನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಹೊಸದಾಗಿ ಸೇರಿಸಲಾಗಿದೆ. |

## ಹಾಲಿ ಇರುವ ನಿಯಮ–ನಿಬಂಧನೆಗಳು

**೯. ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ರಚನೆ, ಕಾರ್ಯವ್ಯಾಪ್ತಿ :**

(೨) ಕೇಂದ್ರ ಪರಿಷತ್ತಿನ ಅಧ್ಯಕ್ಷರು ಇದರ ಪ್ರತಿನಿಧಿಯಾಗಿ ಕಾರ್ಯಕಲಾಪಗಳನ್ನು ನಡೆಸತಕ್ಕದ್ದು. ಈ ಸಮಿತಿಯಲ್ಲಿ **ಪದಾಧಿಕಾರಿಗಳು** ಸೇರಿದಂತೆ ಸದಸ್ಯರು ಈ ಕೆಳಕಾಣಿಸಿದಂತೆ ಇರತಕ್ಕದ್ದು.

೧. **ಚುನಾಯಿತ** ಅಧ್ಯಕ್ಷರು — ೦೧

೨. ಗೌರವ ಕಾರ್ಯದರ್ಶಿಗಳು — ೦೨

೩. ಗೌರವ ಕೋಶಾಧ್ಯಕ್ಷರು — ೦೧

೪. **ಆಯಾ ಜಿಲ್ಲಾ ಘಟಕಗಳ ಚುನಾಯಿತ ಅಧ್ಯಕ್ಷರು** — --
**[ಜಿಲ್ಲೆಗಳ ಒಟ್ಟು ಸಂಖ್ಯೆಗೆ ಅನುಗುಣವಾಗಿ]**

೫. ಗಡಿ ನಾಡು/**ರಾಜ್ಯ** ಘಟಕಗಳ ಚುನಾಯಿತ ಅಧ್ಯಕ್ಷರು — ೦೬
(ತಮಿಳುನಾಡು, ಆಂಧ್ರಪ್ರದೇಶ, **ತೆಲಂಗಾಣ,** ಮಹಾರಾಷ್ಟ್ರ, ಗೋವಾ ಮತ್ತು ಕೇರಳ **ರಾಜ್ಯಗಳ ಗಡಿಗಳಿಗೆ ಹೊಂದಿಕೊಂಡ ಗಡಿ ನಾಡು/ರಾಜ್ಯ ಘಟಕಗಳ ಚುನಾಯಿತ ಅಧ್ಯಕ್ಷರು) ಘಟಕಗಳ ಒಟ್ಟು ಸಂಖ್ಯೆಗೆ ಅನುಗುಣವಾಗಿ**

೬. **ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ [ಹಾಗೂ ಹೊರದೇಶ] ಘಟಕಗಳ ನಾಮನಿರ್ದೇಶಿತ ಅಧ್ಯಕ್ಷರು**
**[ಕರ್ನಾಟಕ ಮತ್ತು ಗಡಿ ನಾಡು/ರಾಜ್ಯಗಳನ್ನು ಹೊರತುಪಡಿಸಿ, ಭಾರತದ ಬೇರಾವುದೇ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ಹೊರರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶ ಘಟಕಗಳಿಗೆ ಅನುಗುಣವಾಗಿ]**
**(ವಿಶೇಷ ಆಹ್ವಾನಿತರು)**

೭. ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರು — ೦೧

೮. ನಿಕಟಪೂರ್ವ ಸಮ್ಮೇಳನಾಧ್ಯಕ್ಷರು — ೦೧

೯. ಕನ್ನಡ ಅಧ್ಯಯನದ ವ್ಯವಸ್ಥೆಯುಳ್ಳ ವಿಶ್ವವಿದ್ಯಾಲಯದ ಪ್ರತಿನಿಧಿಗಳು — ೦೨

೧೦. ಮಹಿಳಾ ಪ್ರತಿನಿಧಿಗಳು — ೦೨

೧೧. ಪರಿಶಿಷ್ಟ ಜಾತಿ ಪ್ರತಿನಿಧಿಗಳು — ೦೨

೧೨. ಪರಿಶಿಷ್ಟ ಪಂಗಡ ಪ್ರತಿನಿಧಿ — ೦೧

## ಪ್ರಸ್ತಾಪಿತ ತಿದ್ದುಪಡಿ

**೯. ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ರಚನೆ, ಕಾರ್ಯವ್ಯಾಪ್ತಿ :**

(೨) ಕೇಂದ್ರ ಪರಿಷತ್ತಿನ ಅಧ್ಯಕ್ಷರು ಇದರ ಪ್ರತಿನಿಧಿಯಾಗಿ ಕಾರ್ಯಕಲಾಪಗಳನ್ನು ನಡೆಸತಕ್ಕದ್ದು. ಈ ಸಮಿತಿಯಲ್ಲಿ **ಪದಾಧಿಕಾರಿಗಳು** ಸೇರಿದಂತೆ ಸದಸ್ಯರು ಈ ಕೆಳಕಾಣಿಸಿದಂತೆ ಇರತಕ್ಕದ್ದು.

೧. **ಚುನಾಯಿತ** ಅಧ್ಯಕ್ಷರು — ೦೧

೨. ಗೌರವ ಕಾರ್ಯದರ್ಶಿಗಳು — ೦೨

೩. ಗೌರವ ಕೋಶಾಧ್ಯಕ್ಷರು — ೦೧

೪. **ಆಯಾ ಜಿಲ್ಲಾ ಘಟಕಗಳ ಚುನಾಯಿತ ಅಧ್ಯಕ್ಷರು** — --
**[ಜಿಲ್ಲೆಗಳ ಒಟ್ಟು ಸಂಖ್ಯೆಗೆ ಅನುಗುಣವಾಗಿ]**

೫. ಗಡಿ ನಾಡು/**ರಾಜ್ಯ** ಘಟಕಗಳ ಚುನಾಯಿತ ಅಧ್ಯಕ್ಷರು — ೦೬
(ತಮಿಳುನಾಡು, ಆಂಧ್ರಪ್ರದೇಶ, **ತೆಲಂಗಾಣ,** ಮಹಾರಾಷ್ಟ್ರ, ಗೋವಾ ಮತ್ತು ಕೇರಳ **ರಾಜ್ಯಗಳ ಗಡಿಗಳಿಗೆ ಹೊಂದಿಕೊಂಡ ಗಡಿ ನಾಡು/ರಾಜ್ಯ ಘಟಕಗಳ ಚುನಾಯಿತ ಅಧ್ಯಕ್ಷರು) ಘಟಕಗಳ ಒಟ್ಟು ಸಂಖ್ಯೆಗೆ ಅನುಗುಣವಾಗಿ**

೬. **ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳ ನಾಮನಿರ್ದೇಶಿತ ಅಧ್ಯಕ್ಷರು**
**[ಕರ್ನಾಟಕ ಮತ್ತು ಗಡಿ ನಾಡು/ರಾಜ್ಯಗಳನ್ನು ಹೊರತುಪಡಿಸಿ, ಭಾರತದ ಬೇರಾವುದೇ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ಹೊರರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶ ಘಟಕಗಳಿಗೆ ಅನುಗುಣವಾಗಿ]**
**(ವಿಶೇಷ ಆಹ್ವಾನಿತರು)**

೭. ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರು — ೦೧

೮. ನಿಕಟಪೂರ್ವ ಸಮ್ಮೇಳನಾಧ್ಯಕ್ಷರು — ೦೧

೯. ಕನ್ನಡ ಅಧ್ಯಯನದ ವ್ಯವಸ್ಥೆಯುಳ್ಳ ವಿಶ್ವವಿದ್ಯಾಲಯದ ಪ್ರತಿನಿಧಿಗಳು — ೦೨

೧೦. ಮಹಿಳಾ ಪ್ರತಿನಿಧಿಗಳು — ೦೨

೧೧. ಪರಿಶಿಷ್ಟ ಜಾತಿ ಪ್ರತಿನಿಧಿಗಳು — ೦೨

೧೨. ಪರಿಶಿಷ್ಟ ಪಂಗಡ ಪ್ರತಿನಿಧಿ — ೦೧

---

*** ನಿಯಮ ಸಂಖ್ಯೆ ೯(೨)(೬) ರಲ್ಲಿಯ 'ಹಾಗೂ ಹೊರದೇಶ' ಎಂಬ ಪದಗಳನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಕೈಬಿಡಲಾಗಿದೆ.**

## ಹಾಲಿ ಇರುವ ನಿಯಮ–ನಿಬಂಧನೆಗಳು

| | | |
|---|---|---|
| ೧೩. | **ಹಿಂದುಳಿದ ವರ್ಗಗಳ ಪ್ರತಿನಿಧಿಗಳು** | **೦೨** |
| ೧೪. | **ಅಲ್ಪಸಂಖ್ಯಾತರ ಪ್ರತಿನಿಧಿಗಳು** | **೦೨** |
| ೧೫. | ಸಂಘ ಸಂಸ್ಥೆಗಳ ಪ್ರತಿನಿಧಿಗಳು | ೦೫ |
| ೧೬. | ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು (ಪದನಿಮಿತ್ತ) | ೦೧ |
| ೧೭. | **ಜಿಲ್ಲಾ ಸಂಘಗಳ ರಿಜಿಸ್ಟ್ರಾರ್ (ಪದನಿಮಿತ್ತ)** | **೦೧** |
| ೧೮. | **ವಾರ್ತಾ ಮತ್ತು ಪ್ರಸಾರ ಇಲಾಖೆಯ ನಿರ್ದೇಶಕರು (ಪದನಿಮಿತ್ತ)** | **೦೧** |
| ೧೯. | **ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು (ಪದನಿಮಿತ್ತ)** | **೦೧** |

೧೦. **ಕೇಂದ್ರ ಪರಿಷತ್ತಿನ ಹಾಗೂ ಇತರ ಘಟಕಗಳ ಅಧ್ಯಕ್ಷರ ಆಯ್ಕೆ : (೧) ಕೇಂದ್ರ ಪರಿಷತ್ತಿನ ಹಾಗೂ ಆಯಾ ಘಟಕಗಳ ಅಧ್ಯಕ್ಷರುಗಳನ್ನು (ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ [ಹಾಗೂ ಹೊರದೇಶ] ಘಟಕಗಳ ಅಧ್ಯಕ್ಷರನ್ನು ಹೊರತುಪಡಿಸಿ) ಪರಿಷತ್ತಿನ ಅರ್ಹ ಮತದಾರರು ಆ್ಯಪ್ ಮೂಲಕ / ಮತದಾನದ ಮೂಲಕ ಚುನಾಯಿಸತಕ್ಕದ್ದು.** ಈ ಚುನಾವಣೆ ನಡೆದ ಎರಡು ತಿಂಗಳೊಳಗಾಗಿ ಜಿಲ್ಲಾ, ತಾಲ್ಲೂಕು, ಹೋಬಳಿ ಹಾಗೂ ಗಡಿ ನಾಡು/ರಾಜ್ಯ ಘಟಕಗಳು ರಚನೆಗೊಂಡು ಅವುಗಳು ಕೇಂದ್ರ ಪರಿಷತ್ತು ಸೂಚಿಸುವ ಕಾರ್ಯಚಟುವಟಿಕೆಗಳನ್ನು ನಡೆಸತಕ್ಕದ್ದು.

**(೨) ಎಲ್ಲಾ ಜಿಲ್ಲಾ ಘಟಕಗಳ ಅಧ್ಯಕ್ಷರು ಮತ್ತು ಗಡಿ ನಾಡು/ರಾಜ್ಯ ಘಟಕಗಳ ಅಧ್ಯಕ್ಷರು ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ [ಪದನಿಮಿತ್ತ] ಸದಸ್ಯರಾಗಿರತಕ್ಕದ್ದು. ಹೊರರಾಜ್ಯಗಳ, ಕೇಂದ್ರಾಡಳಿತ ಪ್ರದೇಶಗಳ [ಹಾಗೂ ಹೊರದೇಶಗಳ] ಘಟಕಗಳ ಅಧ್ಯಕ್ಷರನ್ನು ಕಾರ್ಯಕಾರಿ ಸಮಿತಿ ಸಭೆಗೆ ಆಹ್ವಾನಿತರನ್ನಾಗಿ ಕರೆಯಬಹುದು.**

**(೩) ಪರಿಷತ್ತಿನ ಎಲ್ಲ ಕಾರ್ಯಕಾರಿ ಸಮಿತಿಗಳ ಅವಧಿಯು ಕೇಂದ್ರ ಪರಿಷತ್ತಿನ ಅಧ್ಯಕ್ಷರ ಚುನಾವಣೆ ಫಲಿತಾಂಶ ಘೋಷಣೆಯಾದ ದಿನಾಂಕದಿಂದ** ಐದು ವರ್ಷಗಳ ಅವಧಿಗೆ ಇರತಕ್ಕದ್ದು.

## ಪ್ರಸ್ತಾಪಿತ ತಿದ್ದುಪಡಿ

| | | |
|---|---|---|
| ೧೩. | **ಹಿಂದುಳಿದ ವರ್ಗಗಳ ಪ್ರತಿನಿಧಿಗಳು** | **೦೨** |
| ೧೪. | **ಅಲ್ಪಸಂಖ್ಯಾತರ ಪ್ರತಿನಿಧಿಗಳು** | **೦೨** |
| ೧೫. | ಸಂಘ ಸಂಸ್ಥೆಗಳ ಪ್ರತಿನಿಧಿಗಳು | ೦೫ |
| ೧೬. | ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು (ಪದನಿಮಿತ್ತ) | ೦೧ |
| ೧೭. | **ಜಿಲ್ಲಾ ಸಂಘಗಳ ರಿಜಿಸ್ಟ್ರಾರ್ (ಪದನಿಮಿತ್ತ)** | **೦೧** |
| ೧೮. | **ವಾರ್ತಾ ಮತ್ತು ಪ್ರಸಾರ ಇಲಾಖೆಯ ನಿರ್ದೇಶಕರು (ಪದನಿಮಿತ್ತ)** | **೦೧** |
| ೧೯. | **ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು (ಪದನಿಮಿತ್ತ)** | **೦೧** |

೧೦. **ಕೇಂದ್ರ ಪರಿಷತ್ತಿನ ಹಾಗೂ ಇತರ ಘಟಕಗಳ ಅಧ್ಯಕ್ಷರ ಆಯ್ಕೆ : (೧) ಕೇಂದ್ರ ಪರಿಷತ್ತಿನ ಹಾಗೂ ಆಯಾ ಘಟಕಗಳ ಅಧ್ಯಕ್ಷರುಗಳನ್ನು (ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳ ಅಧ್ಯಕ್ಷರನ್ನು ಹೊರತುಪಡಿಸಿ) ಪರಿಷತ್ತಿನ ಅರ್ಹ ಮತದಾರರು ಆ್ಯಪ್ ಮೂಲಕ / ಮತದಾನದ ಮೂಲಕ ಚುನಾಯಿಸತಕ್ಕದ್ದು.** ಈ ಚುನಾವಣೆ ನಡೆದ ಎರಡು ತಿಂಗಳೊಳಗಾಗಿ ಜಿಲ್ಲಾ, ತಾಲ್ಲೂಕು, ಹೋಬಳಿ ಹಾಗೂ ಗಡಿ ನಾಡು/ರಾಜ್ಯ ಘಟಕಗಳು ರಚನೆಗೊಂಡು ಅವುಗಳು ಕೇಂದ್ರ ಪರಿಷತ್ತು ಸೂಚಿಸುವ ಕಾರ್ಯಚಟುವಟಿಕೆಗಳನ್ನು ನಡೆಸತಕ್ಕದ್ದು.

**(೨) ಎಲ್ಲಾ ಜಿಲ್ಲಾ ಘಟಕಗಳ ಅಧ್ಯಕ್ಷರು ಮತ್ತು ಗಡಿ ನಾಡು/ರಾಜ್ಯ ಘಟಕಗಳ ಅಧ್ಯಕ್ಷರು ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿರತಕ್ಕದ್ದು. ಹೊರರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಘಟಕಗಳ ಅಧ್ಯಕ್ಷರನ್ನು ಕಾರ್ಯಕಾರಿ ಸಮಿತಿ ಸಭೆಗೆ ಆಹ್ವಾನಿತರನ್ನಾಗಿ ಕರೆಯಬಹುದು.**

**(೩) ಪರಿಷತ್ತಿನ ಎಲ್ಲ *[ಘಟಕಗಳ]* ಕಾರ್ಯಕಾರಿ ಸಮಿತಿಗಳ ಅವಧಿಯು ಕೇಂದ್ರ ಪರಿಷತ್ತಿನ ಅಧ್ಯಕ್ಷರ ಚುನಾವಣೆ ಫಲಿತಾಂಶ ಘೋಷಣೆಯಾದ ದಿನಾಂಕದಿಂದ** ಐದು ವರ್ಷಗಳ ಅವಧಿಗೆ ಇರತಕ್ಕದ್ದು.

---

*** ನಿಯಮ ಸಂಖ್ಯೆ ೧೦(೧)ರಲ್ಲಿಯ ‘ಹಾಗೂ ಹೊರದೇಶ’, ೧೦(೨)ರಲ್ಲಿಯ ‘ಪದನಿಮಿತ್ತ’, ‘ಹಾಗೂ ಹೊರದೇಶಗಳ’ ಎಂಬ ಪದಗಳನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಕೈಬಿಟ್ಟು, ೧೦(೩)ರಲ್ಲಿ ‘ಘಟಕಗಳ’ ಪದವನ್ನು ಸೇರಿಸಲಾಗಿದೆ.**

## ಹಾಲಿ ಇರುವ ನಿಯಮ–ನಿಬಂಧನೆಗಳು

೧೭. [ಹೊರದೇಶ ಘಟಕ]: (೧) [ವಿಶ್ವಸಂಸ್ಥೆಯ ಮಾನ್ಯತೆ ಪಡೆದ ಯಾವುದೇ ಹೊರದೇಶದಲ್ಲಿ ಕನಿಷ್ಠ ೧೦೦ ಮಂದಿ ಪರಿಷತ್ತಿನ ಆಜೀವ ಸದಸ್ಯರಿದ್ದರೆ ಅಂತಹ ದೇಶದಲ್ಲಿ ಹೊರದೇಶ ಘಟಕ ತೆರೆಯಬಹುದು.]

(೨) ಅಸ್ತಿತ್ವಕ್ಕೆ ಬಂದ ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ [ಹಾಗೂ ಹೊರದೇಶ] ಘಟಕಗಳಿಗೆ ಅಧ್ಯಕ್ಷರನ್ನು ನಾಮನಿರ್ದೇಶನ ಮಾಡುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರುತ್ತದೆ.

೧೮. ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ [ಮತ್ತು ಹೊರದೇಶ] ಘಟಕಗಳ ಕಾರ್ಯಕಾರಿ ಸಮಿತಿ : (೧) ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ [ಮತ್ತು ಹೊರದೇಶ] ಘಟಕಗಳ ಅಧ್ಯಕ್ಷರು ನಾಮನಿರ್ದೇಶನಗೊಂಡ ನಂತರದ ಎರಡು ತಿಂಗಳೊಳಗಾಗಿ ತಮ್ಮ ತಮ್ಮ ಘಟಕಗಳಿಗೆ ಈ ಕೆಳಕಾಣಿಸಿದಂತೆ ಕಾರ್ಯಕಾರಿ ಸಮಿತಿಯನ್ನು ರಚಿಸಿಕೊಂಡು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಂದ ಅನುಮೋದನೆ ಪಡೆದುಕೊಳ್ಳತಕ್ಕದ್ದು.

| | | |
|---|---|---|
| ೧. | ಅಧ್ಯಕ್ಷರು | ೦೧ |
| ೨. | ಗೌರವ ಕಾರ್ಯದರ್ಶಿ | ೦೧ |
| ೩. | ಗೌರವ ಕೋಶಾಧ್ಯಕ್ಷರು | ೦೧ |

(೨) ಈ ಘಟಕಗಳ ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾಗುವವರು ಆಯಾ ರಾಜ್ಯದ, ಕೇಂದ್ರಾಡಳಿತ ಪ್ರದೇಶ [ಮತ್ತು ಹೊರದೇಶ] ಘಟಕಗಳ ಕಾರ್ಯವ್ಯಾಪ್ತಿಯಲ್ಲಿ ವಾಸವಾಗಿದ್ದು, ಪರಿಷತ್ತಿನ ಸದಸ್ಯರಾಗಿರತಕ್ಕದ್ದು.

೨೦. ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಅಧಿಕಾರ ಮತ್ತು ಜವಾಬ್ದಾರಿಗಳು :

(೪) ಅಧ್ಯಕ್ಷರ ಅಧಿಕಾರಾವಧಿ ಪೂರ್ಣಗೊಳ್ಳುವ ಮೊದಲೇ ಕೇಂದ್ರ ಪರಿಷತ್ತಿನ ಅಧ್ಯಕ್ಷ ಸ್ಥಾನ ಯಾವುದೇ ಕಾರಣದಿಂದಾಗಿ ತೆರವಾದಲ್ಲಿ ಇನ್ನುಳಿದ ಅವಧಿಗೆ ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯರಲ್ಲಿ ಒಬ್ಬರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ಕಾರ್ಯಕಾರಿ ಸಮಿತಿಯಲ್ಲಿ ಆಯ್ಕೆ ಮಾಡಿಕೊಳ್ಳತಕ್ಕದ್ದು. ಇದೇ ನಿಯಮ [ಹೊರದೇಶ ಘಟಕಗಳನ್ನು ಹೊರತು ಪಡಿಸಿ] ಪರಿಷತ್ತಿನ ಉಳಿದೆಲ್ಲಾ ಘಟಕಗಳಿಗೆ ಅನ್ವಯವಾಗತಕ್ಕದ್ದು.

## ಪ್ರಸ್ತಾಪಿತ ತಿದ್ದುಪಡಿ

೧೭. ಕೆಲವು ಘಟಕಗಳ ಅಧ್ಯಕ್ಷರನ್ನು ಹಾಗೂ ಅಂಗಸಂಸ್ಥೆಗಳ ಸಂಚಾಲಕರುಗಳ ನೇಮಕ :

(೧) ............................ XXXX ..........................................

(೨) ಅಸ್ತಿತ್ವಕ್ಕೆ ಬಂದ ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳಿಗೆ ಅಧ್ಯಕ್ಷರನ್ನು ಹಾಗೂ *[ವಿದೇಶಗಳಲ್ಲಿಯ ಅಂಗಸಂಸ್ಥೆಗಳಿಗೆ ಸಂಚಾಲಕರುಗಳನ್ನು]* ನಾಮನಿರ್ದೇಶನ ಮಾಡುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರುತ್ತದೆ.

೧೮. ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳ ಕಾರ್ಯಕಾರಿ ಸಮಿತಿ : (೧) ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳ ಅಧ್ಯಕ್ಷರು ನಾಮನಿರ್ದೇಶನಗೊಂಡ ನಂತರದ ಎರಡು ತಿಂಗಳೊಳಗಾಗಿ ತಮ್ಮ ತಮ್ಮ ಘಟಕಗಳಿಗೆ ಈ ಕೆಳಕಾಣಿಸಿದಂತೆ ಕಾರ್ಯಕಾರಿ ಸಮಿತಿಯನ್ನು ರಚಿಸಿಕೊಂಡು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಂದ ಅನುಮೋದನೆ ಪಡೆದುಕೊಳ್ಳತಕ್ಕದ್ದು.

| | | |
|---|---|---|
| ೧. | ಅಧ್ಯಕ್ಷರು | ೦೧ |
| ೨. | ಗೌರವ ಕಾರ್ಯದರ್ಶಿ | ೦೧ |
| ೩. | ಗೌರವ ಕೋಶಾಧ್ಯಕ್ಷರು | ೦೧ |

(೨) ಈ ಘಟಕಗಳ ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾಗುವವರು ಆಯಾ ರಾಜ್ಯದ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳ ಕಾರ್ಯವ್ಯಾಪ್ತಿಯಲ್ಲಿ ವಾಸವಾಗಿದ್ದು, ಪರಿಷತ್ತಿನ ಸದಸ್ಯರಾಗಿರತಕ್ಕದ್ದು.

೨೦. ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಅಧಿಕಾರ ಮತ್ತು ಜವಾಬ್ದಾರಿಗಳು :

(೪) ಅಧ್ಯಕ್ಷರ ಅಧಿಕಾರಾವಧಿ ಪೂರ್ಣಗೊಳ್ಳುವ ಮೊದಲೇ ಕೇಂದ್ರ ಪರಿಷತ್ತಿನ ಅಧ್ಯಕ್ಷ ಸ್ಥಾನ ಯಾವುದೇ ಕಾರಣದಿಂದಾಗಿ ತೆರವಾದಲ್ಲಿ ಇನ್ನುಳಿದ ಅವಧಿಗೆ ಕೇಂದ್ರ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯರಲ್ಲಿ ಒಬ್ಬರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ಕಾರ್ಯಕಾರಿ ಸಮಿತಿಯಲ್ಲಿ ಆಯ್ಕೆ ಮಾಡಿಕೊಳ್ಳತಕ್ಕದ್ದು. ಇದೇ ನಿಯಮ ಪರಿಷತ್ತಿನ ಉಳಿದೆಲ್ಲಾ ಘಟಕಗಳಿಗೆ ಅನ್ವಯವಾಗತಕ್ಕದ್ದು.

---

೧) ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ನಿಯಮ ಸಂಖ್ಯೆ ೧೭ರ ಶೀರ್ಷಿಕೆ 'ಹೊರದೇಶ ಘಟಕ' ಎಂಬುದರ ಬದಲಾಗಿ 'ಕೆಲವು ಘಟಕಗಳ ಅಧ್ಯಕ್ಷರನ್ನು ಹಾಗೂ ಅಂಗಸಂಸ್ಥೆಗಳ ಸಂಚಾಲಕರುಗಳ ನೇಮಕ' ಎಂಬುದಾಗಿ ಸೇರಿಸಿದ್ದು, ನಿಯಮ ಸಂಖ್ಯೆ ೧೭(೧)ನ್ನು ಕೈಬಿಟ್ಟಿದ್ದಲ್ಲದೇ, ನಿಯಮ ಸಂಖ್ಯೆ ೧೭(೨)ರಲ್ಲಿಯ 'ಹಾಗೂ ಹೊರದೇಶ' ಎಂಬ ಪದಗಳನ್ನು ಕೈಬಿಡಲಾಗಿದೆ ಮತ್ತು 'ಅಧ್ಯಕ್ಷರನ್ನು ಹಾಗೂ' ಎಂಬ ಪದದ ನಂತರ "ವಿದೇಶಗಳಲ್ಲಿಂಯ ಅಂಗಸಂಸ್ಥೆಗಳಿಗೆ ಸಂಚಾಲಕರುಗಳನ್ನು" ಎಂಬ ಪದಗಳನ್ನು ಹೊಸದಾಗಿ ಸೇರಿಸಲಾಗಿದೆ.

೨) ನಿಯಮ ಸಂಖ್ಯೆ ೧೮ರ ಶಿರ್ಷೀಕೆಯಲ್ಲಿ ಹಾಗೂ ೧೮(೧) ಮತ್ತು (೨)ರಲ್ಲಿಯ 'ಮತ್ತು ಹೊರದೇಶ' ಎಂಬ ಪದಗಳನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಕೈಬಿಡಲಾಗಿದೆ.

೩) ನಿಯಮ ಸಂಖ್ಯೆ ೨೦(೪)ರಲ್ಲಿಯ 'ಹೊರದೇಶ ಘಟಕಗಳನ್ನು ಹೊರತುಪಡಿಸಿ' ಎಂಬ ಪದಗಳನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಕೈಬಿಡಲಾಗಿದೆ.

## ಹಾಲಿ ಇರುವ ನಿಯಮ–ನಿಬಂಧನೆಗಳು

**೨೨. ಕಾರ್ಯಕಾರಿ ಸಮಿತಿಯ ಸಭೆ :**

(೩) **ಕಾರ್ಯಕಾರಿ ಸಮಿತಿಗಳ ಕನಿಷ್ಠ ಸಂಖ್ಯೆಯ ಸಭೆಗಳು:** ಕೇಂದ್ರ ಪರಿಷತ್ತಿನ ಹಾಗೂ ಪ್ರತಿ ಜಿಲ್ಲೆ, ತಾಲ್ಲೂಕು, ಹೋಬಳಿ, ಗಡಿನಾಡು/ರಾಜ್ಯ ಘಟಕಗಳ ಕಾರ್ಯಕಾರಿ ಸಮಿತಿಯು ಒಂದು ವರ್ಷದಲ್ಲಿ ಕನಿಷ್ಠ ನಾಲ್ಕು ಬಾರಿ ; ಹೊರರಾಜ್ಯ / ಕೇಂದ್ರಾಡಳಿತ ಪ್ರದೇಶ ಘಟಕಗಳ ಕಾರ್ಯಕಾರಿ ಸಮಿತಿಯು ಒಂದು ವರ್ಷದಲ್ಲಿ ಕನಿಷ್ಠ ಮೂರು ಬಾರಿ ; [ಹೊರದೇಶ ಘಟಕಗಳ ಕಾರ್ಯಕಾರಿ ಸಮಿತಿಯು ವರ್ಷದಲ್ಲಿ ಒಂದು ಬಾರಿ ಸಭೆಯನ್ನು] ನಡೆಸತಕ್ಕದ್ದು. ಅವಶ್ಯವೆನಿಸಿದಲ್ಲಿ ವಿಶೇಷ ಹಾಗೂ ತುರ್ತು ಸಭೆಯನ್ನು ನಡೆಸಲು ಆಯಾ ಘಟಕಗಳ ಅಧ್ಯಕ್ಷರು ಅಧಿಕಾರ ಹೊಂದಿರುತ್ತಾರೆ.

**೨೪. ಕಾರ್ಯಕಾರಿ ಸಮಿತಿ ಸಭೆಯ ಅವಶ್ಯ ಸದಸ್ಯರ ಸಂಖ್ಯೆ (ಕೋರಂ):**

(೧) ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ [ಮತ್ತು ಹೊರದೇಶ] ಘಟಕಗಳ ಕಾರ್ಯಕಾರಿ ಸಮಿತಿಗಳನ್ನು ಹೊರತುಪಡಿಸಿ ಕೇಂದ್ರ ಪರಿಷತ್ತು ಮತ್ತು ಇತರ ಘಟಕಗಳ ಕಾರ್ಯಕಾರಿ ಸಮಿತಿಯ ಸಭೆಗೆ ಆಯಾ ಸಮಿತಿಯ ಒಟ್ಟು ಸದಸ್ಯರ ಕನಿಷ್ಠ ೨/೩ (ಮೂರನೆಯ ಎರಡು) ಭಾಗದಷ್ಟು ಸದಸ್ಯರು ಹಾಜರಿರತಕ್ಕದ್ದು. ಅದು ಆಯಾ ಸಭೆಗೆ ಅವಶ್ಯ ಸದಸ್ಯರ ಸಂಖ್ಯೆ (ಕೋರಂ) ಆಗುತ್ತದೆ. ಸಭೆ ನಡೆಸಲು ಕನಿಷ್ಠ ಅವಶ್ಯ ಸಂಖ್ಯೆಯ ಸದಸ್ಯರು ಹಾಜರಿಲ್ಲದಿದ್ದಲ್ಲಿ ಅಂತಹ ಸಭೆಯನ್ನು ಒಂದು ಗಂಟೆಯ ಅವಧಿಗೆ ಅಥವಾ ಅಧ್ಯಕ್ಷರ ವಿವೇಚನಾನುಸಾರ ನಿಗದಿಗೊಳಿಸಲಾದ ನಿರ್ದಿಷ್ಟ ಸ್ಥಳ, ದಿನ ಮತ್ತು ಸಮಯಕ್ಕೆ ಮುಂದೂಡಬಹುದು. ಹೀಗೆ ಮುಂದೂಡಲ್ಪಟ್ಟ ಸಭೆಗೆ ಅವಶ್ಯ ಸಂಖ್ಯೆಯ ಸದಸ್ಯರ ಹಾಜರಾತಿ (ಕೋರಂ) ಅವಶ್ಯಕತೆ ಇರುವುದಿಲ್ಲ. ಸೂಚನಾಪತ್ರದಲ್ಲಿ ಇಲ್ಲದ ಯಾವುದೇ ಹೊಸ ವಿಷಯಗಳನ್ನು ಮುಂದೂಡಿದ ಸಭೆಯಲ್ಲಿ ಮಂಡಿಸುವಂತಿಲ್ಲ.

(೨) ಇತರ ಘಟಕಗಳ ಕಾರ್ಯಕಾರಿ ಸಮಿತಿಯ ಸಭೆಗಳ ಕೋರಂ : ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ [ಮತ್ತು ಹೊರದೇಶ] ಘಟಕಗಳ ಕಾರ್ಯಕಾರಿ ಸಮಿತಿಗೆ ಅನುಕ್ರಮವಾಗಿ ಅಧ್ಯಕ್ಷರನ್ನೊಳಗೊಂಡಂತೆ ಕೇವಲ ಮೂವರು ಸದಸ್ಯರು ಮಾತ್ರ ಇರುವುದರಿಂದ ಈ ಕಾರ್ಯಕಾರಿ ಸಮಿತಿಗಳ ಪ್ರತಿ ಸಭೆಗೆ ಎಲ್ಲಾ ಸದಸ್ಯರ ಹಾಜರಾತಿ ಇರತಕ್ಕದ್ದು.

## ಪ್ರಸ್ತಾಪಿತ ತಿದ್ದುಪಡಿ

**೨೨. ಕಾರ್ಯಕಾರಿ ಸಮಿತಿಯ ಸಭೆ :**

(೩) **ಕಾರ್ಯಕಾರಿ ಸಮಿತಿಗಳ ಕನಿಷ್ಠ ಸಂಖ್ಯೆಯ ಸಭೆಗಳು:** ಕೇಂದ್ರ ಪರಿಷತ್ತಿನ ಹಾಗೂ ಪ್ರತಿ ಜಿಲ್ಲೆ, ತಾಲ್ಲೂಕು, ಹೋಬಳಿ, ಗಡಿನಾಡು/ರಾಜ್ಯ ಘಟಕಗಳ ಕಾರ್ಯಕಾರಿ ಸಮಿತಿಯು ಒಂದು ವರ್ಷದಲ್ಲಿ ಕನಿಷ್ಠ ನಾಲ್ಕು ಬಾರಿ ; ಹೊರರಾಜ್ಯ / ಕೇಂದ್ರಾಡಳಿತ ಪ್ರದೇಶ ಘಟಕಗಳ ಕಾರ್ಯಕಾರಿ ಸಮಿತಿಯು ಒಂದು ವರ್ಷದಲ್ಲಿ ಕನಿಷ್ಠ ಮೂರು ಬಾರಿ ಸಭೆಗಳನ್ನು ನಡೆಸತಕ್ಕದ್ದು. ಅವಶ್ಯವೆನಿಸಿದಲ್ಲಿ ವಿಶೇಷ ಹಾಗೂ ತುರ್ತು ಸಭೆಯನ್ನು ನಡೆಸಲು ಆಯಾ ಘಟಕಗಳ ಅಧ್ಯಕ್ಷರು ಅಧಿಕಾರ ಹೊಂದಿರುತ್ತಾರೆ.

**೨೪. ಕಾರ್ಯಕಾರಿ ಸಮಿತಿ ಸಭೆಯ ಅವಶ್ಯ ಸದಸ್ಯರ ಸಂಖ್ಯೆ (ಕೋರಂ):**

(೧) ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳ ಕಾರ್ಯಕಾರಿ ಸಮಿತಿಗಳನ್ನು ಹೊರತುಪಡಿಸಿ ಕೇಂದ್ರ ಪರಿಷತ್ತು ಮತ್ತು ಇತರ ಘಟಕಗಳ ಕಾರ್ಯಕಾರಿ ಸಮಿತಿಯ ಸಭೆಗೆ ಆಯಾ ಸಮಿತಿಯ ಒಟ್ಟು ಸದಸ್ಯರ ಕನಿಷ್ಠ ೨/೩ (ಮೂರನೆಯ ಎರಡು) ಭಾಗದಷ್ಟು ಸದಸ್ಯರು ಹಾಜರಿರತಕ್ಕದ್ದು. ಅದು ಆಯಾ ಸಭೆಗೆ ಅವಶ್ಯ ಸದಸ್ಯರ ಸಂಖ್ಯೆ (ಕೋರಂ) ಆಗುತ್ತದೆ. ಸಭೆ ನಡೆಸಲು ಕನಿಷ್ಠ ಅವಶ್ಯ ಸಂಖ್ಯೆಯ ಸದಸ್ಯರು ಹಾಜರಿಲ್ಲದಿದ್ದಲ್ಲಿ ಅಂತಹ ಸಭೆಯನ್ನು ಒಂದು ಗಂಟೆಯ ಅವಧಿಗೆ ಅಥವಾ ಅಧ್ಯಕ್ಷರ ವಿವೇಚನಾನುಸಾರ ನಿಗದಿಗೊಳಿಸಲಾದ ನಿರ್ದಿಷ್ಟ ಸ್ಥಳ, ದಿನ ಮತ್ತು ಸಮಯಕ್ಕೆ ಮುಂದೂಡಬಹುದು. ಹೀಗೆ ಮುಂದೂಡಲ್ಪಟ್ಟ ಸಭೆಗೆ ಅವಶ್ಯ ಸಂಖ್ಯೆಯ ಸದಸ್ಯರ ಹಾಜರಾತಿ (ಕೋರಂ) ಅವಶ್ಯಕತೆ ಇರುವುದಿಲ್ಲ. ಸೂಚನಾಪತ್ರದಲ್ಲಿ ಇಲ್ಲದ ಯಾವುದೇ ಹೊಸ ವಿಷಯಗಳನ್ನು ಮುಂದೂಡಿದ ಸಭೆಯಲ್ಲಿ ಮಂಡಿಸುವಂತಿಲ್ಲ.

(೨) ಇತರ ಘಟಕಗಳ ಕಾರ್ಯಕಾರಿ ಸಮಿತಿಯ ಸಭೆಗಳ ಕೋರಂ : ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳ ಕಾರ್ಯಕಾರಿ ಸಮಿತಿಗೆ ಅನುಕ್ರಮವಾಗಿ ಅಧ್ಯಕ್ಷರನ್ನೊಳಗೊಂಡಂತೆ ಕೇವಲ ಮೂವರು ಸದಸ್ಯರು ಮಾತ್ರ ಇರುವುದರಿಂದ ಈ ಕಾರ್ಯಕಾರಿ ಸಮಿತಿಗಳ ಪ್ರತಿ ಸಭೆಗೆ ಎಲ್ಲಾ ಸದಸ್ಯರ ಹಾಜರಾತಿ ಇರತಕ್ಕದ್ದು.

---

೧) ನಿಯಮ ಸಂಖ್ಯೆ ೨೨(೩)ರಲ್ಲಿಯ 'ಹೊರದೇಶ ಘಟಕಗಳ ಕಾರ್ಯಕಾರಿ ಸಮಿತಿಯು ವರ್ಷದಲ್ಲಿ ಒಂದು ಬಾರಿ ಸಭೆಯನ್ನು' ಎಂಬ ಪದಗಳನ್ನು ಕೈಬಿಟ್ಟು, ಅವುಗಳ ಬದಲಿಗೆ 'ಸಭೆಗಳನ್ನು' ಎಂಬ ಪದವನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಸೇರಿಸಲಾಗಿದೆ.

೨) ನಿಯಮ ಸಂಖ್ಯೆ ೨೪ರ (೧) ಮತ್ತು (೨)ರಲ್ಲಿಯ 'ಮತ್ತು ಹೊರದೇಶ' ಎಂಬ ಪದಗಳನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಕೈಬಿಡಲಾಗಿದೆ.

## ಹಾಲಿ ಇರುವ ನಿಯಮ–ನಿಬಂಧನೆಗಳು

೨೭. ತಿದ್ದುಪಡಿಗಳು :

(೪) ಉದ್ದೇಶಿತ ತಿದ್ದುಪಡಿಗೆ ವಿಶೇಷ ಸಾಮಾನ್ಯ ಸಭೆಯ ಅನುಮೋದನೆ ಹಾಗೂ ನೋಂದಣಿ : ಉದ್ದೇಶಿತ ತಿದ್ದುಪಡಿಗೆ ಅನುಮೋದನೆಯನ್ನು ಪಡೆಯಲಿಕ್ಕಾಗಿ ಕರೆಯಬೇಕಾದ ವಿಶೇಷ ಸಾಮಾನ್ಯ ಸಭೆಯ ದಿನಾಂಕವನ್ನು ನಿಗದಿಗೊಳಿಸಿ, ಆ ದಿನಾಂಕಕ್ಕೆ ೨೧ ದಿನಗಳ ಮುಂಚಿತವಾಗಿ ಉದ್ದೇಶಿತ ತಿದ್ದುಪಡಿಯನ್ನು ಒಳಗೊಂಡ ಸೂಚನಾ ಪತ್ರವನ್ನು ಪರಿಷತ್ತಿನ ಆ್ಯಪ್ / ಸಾಮಾಜಿಕ ಜಾಲತಾಣ / ಪತ್ರದ ಮೂಲಕ, ಪರಿಷತ್ತಿನ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಅರ್ಹ ಸದಸ್ಯರ ಗಮನಕ್ಕೆ ತರತಕ್ಕದ್ದು. ಆ ಸಭೆಯಲ್ಲಿ ಹಾಜರಿದ್ದ ಒಟ್ಟು ಸದಸ್ಯರ ೩/೪ (ನಾಲ್ಕನೆಯ ಮೂರರಷ್ಟು) ಸಂಖ್ಯೆಯ ಸದಸ್ಯರು ಬಹುಮತದಿಂದ ತಿದ್ದುಪಡಿಯನ್ನು ಅನುಮೋದಿಸಿದಲ್ಲಿ, ಅನುಮೋದಿತ ತಿದ್ದುಪಡಿಯನ್ನು ೩೦ ದಿನಗಳೊಳಗಾಗಿ ಸಕ್ಷಮ ಪ್ರಾಧಿಕಾರದಲ್ಲಿ [ನೋಂದಣಿ ಮಾಡಿಕೊಳ್ಳತಕ್ಕದ್ದು.] ಹೀಗೆ ನೋಂದಣಿಯಾದ ನಂತರವೇ ತಿದ್ದುಪಡಿ ಜಾರಿಗೆ ಬರುತ್ತದೆ.

*ನಿಯಮ ೨೭(೫) ಹೊಸ ಸೇರ್ಪಡೆ*

## ಪ್ರಸ್ತಾಪಿತ ತಿದ್ದುಪಡಿ

೨೭. ತಿದ್ದುಪಡಿಗಳು :

(೪) ಉದ್ದೇಶಿತ ತಿದ್ದುಪಡಿಗೆ ವಿಶೇಷ ಸಾಮಾನ್ಯ ಸಭೆಯ ಅನುಮೋದನೆ ಹಾಗೂ ನೋಂದಣಿ : ಉದ್ದೇಶಿತ ತಿದ್ದುಪಡಿಗೆ ಅನುಮೋದನೆಯನ್ನು ಪಡೆಯಲಿಕ್ಕಾಗಿ ಕರೆಯಬೇಕಾದ ವಿಶೇಷ ಸಾಮಾನ್ಯ ಸಭೆಯ ದಿನಾಂಕವನ್ನು ನಿಗದಿಗೊಳಿಸಿ, ಆ ದಿನಾಂಕಕ್ಕೆ ೨೧ ದಿನಗಳ ಮುಂಚಿತವಾಗಿ ಉದ್ದೇಶಿತ ತಿದ್ದುಪಡಿಯನ್ನು ಒಳಗೊಂಡ ಸೂಚನಾ ಪತ್ರವನ್ನು ಪರಿಷತ್ತಿನ ಆ್ಯಪ್ / ಸಾಮಾಜಿಕ ಜಾಲತಾಣ / ಪತ್ರದ ಮೂಲಕ, ಪರಿಷತ್ತಿನ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಅರ್ಹ ಸದಸ್ಯರ ಗಮನಕ್ಕೆ ತರತಕ್ಕದ್ದು. ಆ ಸಭೆಯಲ್ಲಿ ಹಾಜರಿದ್ದ ಒಟ್ಟು ಸದಸ್ಯರ ೩/೪ (ನಾಲ್ಕನೆಯ ಮೂರರಷ್ಟು) ಸಂಖ್ಯೆಯ ಸದಸ್ಯರು ಬಹುಮತದಿಂದ ತಿದ್ದುಪಡಿಯನ್ನು ಅನುಮೋದಿಸಿದಲ್ಲಿ, ಅನುಮೋದಿತ ತಿದ್ದುಪಡಿಯನ್ನು ೩೦ ದಿನಗಳೊಳಗಾಗಿ ಸಕ್ಷಮ ಪ್ರಾಧಿಕಾರದಲ್ಲಿ *[ನೋಂದಣಿಗೆ ಸಲ್ಲಿಸತಕ್ಕದ್ದು]* ಹೀಗೆ ನೋಂದಣಿಯಾದ ನಂತರವೇ ತಿದ್ದುಪಡಿ ಜಾರಿಗೆ ಬರುತ್ತದೆ.

*(೫)* ವಿಶೇಷ ಸಂದರ್ಭಕ್ಕನುಗುಣವಾಗಿ ತಿದ್ದುಪಡಿಯ ಯಾವುದೇ ಭಾಗದ ಪೂರ್ವಾನ್ವಯ ಜಾರಿಗೆ ದಿನಾಂಕ ನಿಗದಿಗೊಳಿಸುವುದು : ವಿಶೇಷ ಸಂದರ್ಭ ಒದಗಿ ಬಂದಾಗ ಅದಕ್ಕನುಗುಣವಾಗಿ ತಿದ್ದುಪಡಿಯ ಯಾವುದೇ ಭಾಗದ ಜಾರಿಗಾಗಿ ನಿರ್ದಿಷ್ಟವಾದ ಪೂರ್ವ (ಹಿಂದಿನ) ದಿನಾಂಕವನ್ನು ತಿದ್ದುಪಡಿಯಲ್ಲಿ ನಿಗದಿಗೊಳಿಸಬಹುದು.*

* ನಿಯಮ ಸಂಖ್ಯೆ ೨೭(೪) ರಲ್ಲಿಯ 'ನೋಂದಣಿ ಮಾಡಿಕೊಳ್ಳತಕ್ಕದ್ದು' ಎಂಬ ಪದಗಳನ್ನು ಕೈಬಿಟ್ಟು, ಅವುಗಳ ಬದಲಾಗಿ 'ನೋಂದಣಿಗೆ ಸಲ್ಲಿಸತಕ್ಕದ್ದು' ಎಂಬ ಪದಗಳನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಸೇರಿಸಲಾಗಿದೆ. ಜೊತೆಗೆ ೨೭(೫) ಅನ್ನು ಹೊಸದಾಗಿ ಸೇರಿಸಲಾಗಿದೆ.

| ಹಾಲಿ ಇರುವ ನಿಯಮ–ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ |
| --- | --- |
| ೩೨. ಕೇಂದ್ರ ಪರಿಷತ್ತು ಹಾಗೂ ಇತರ ಘಟಕಗಳಿಗೆ ಸಂಬಂಧಿಸಿದ ಸಾಮಾನ್ಯ ನಿಯಮಗಳು: (೧) ಪರಿಷತ್ತಿನ ವಿವಿಧ ಕಾರ್ಯಕಾರಿ ಸಮಿತಿಗಳ ರಚನೆಗೆ ಸಂಬಂಧಿಸಿದ ನಿಯಮಗಳ ಹೊರತಾಗಿ ನೇಮಕ ಮಾಡಿಕೊಂಡ ಸದಸ್ಯರ ಸ್ಥಾನ ಸೃಷ್ಟಿಸಿಕೊಂಡ ಪದಾಧಿಕಾರಿ ಸ್ಥಾನ ಅಸಿಂಧು: (ಅ) ಕೇಂದ್ರ ಪರಿಷತ್ತು, (ಆ) ಜಿಲ್ಲಾ ಘಟಕ, (ಇ) ತಾಲ್ಲೂಕು ಮತ್ತು ಕ್ಷೇತ್ರ ಘಟಕ, (ಈ) ಹೋಬಳಿ ಘಟಕ, (ಉ) ಗಡಿನಾಡು/ರಾಜ್ಯ ಘಟಕ ಹಾಗೂ (ಊ) ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ [ಮತ್ತು ಹೊರದೇಶ] ಘಟಕಗಳ ಕಾರ್ಯಕಾರಿ ಸಮಿತಿಗಳು ಅನುಕ್ರಮವಾಗಿ ನಿಯಮ ೯(೨); ೧೨(೧); ೧೩(೧); ೧೪(೨); ೧೫(೨) ಮತ್ತು ೧೮(೧) ಇವುಗಳ ಅಡಿಯಲ್ಲಿ ಅಸ್ತಿತ್ವಕ್ಕೆ ಬರಲಿದ್ದು, ಅವುಗಳ ಪದಾಧಿಕಾರಿಗಳ ಹಾಗೂ ಸದಸ್ಯರ ವಿವರಗಳನ್ನು ಆಯಾ ನಿಯಮಗಳಲ್ಲಿ ಕೊಡಲಾಗಿದೆ. ಈ ನಿಯಮಗಳಿಗೆ ಹೊರತಾಗಿ ಯಾವುದೇ ಕಾರ್ಯಕಾರಿ ಸಮಿತಿಯಲ್ಲಿ, ಯಾವುದೇ ವರ್ಗದ ಸದಸ್ಯರನ್ನು ನೇಮಕ ಮಾಡಿಕೊಳ್ಳುವ ಅಥವಾ ಯಾವುದೇ ಪದಾಧಿಕಾರಿ ಸ್ಥಾನವನ್ನು ಸೃಷ್ಟಿಸಿಕೊಳ್ಳುವ ಅಧಿಕಾರ ಕೇಂದ್ರ ಪರಿಷತ್ತಿನ ಮತ್ತು ಆಯಾ ಘಟಕದ ಅಧ್ಯಕ್ಷರಿಗೆ ಇರತಕ್ಕದ್ದಲ್ಲ. ಅಂತಹ ಸದಸ್ಯತ್ವ / ಸ್ಥಾನ ನಿಯಮ ಬಾಹಿರವೆಂದು ಪರಿಗಣಿಸಲ್ಪಟ್ಟು, ಅಸಿಂಧುವಾಗತಕ್ಕದ್ದು. ನಿಯಮಬಾಹಿರವಾಗಿ ಸ್ಥಾನವನ್ನು ಸೃಷ್ಟಿಸಿದವರ / ಸದಸ್ಯರನ್ನು ನೇಮಕ ಮಾಡಿದವರ ವಿರುದ್ಧ ಕಾನೂನು ಕ್ರಮಕೈಗೊಳ್ಳತಕ್ಕದ್ದು. | ೩೨. ಕೇಂದ್ರ ಪರಿಷತ್ತು ಹಾಗೂ ಇತರ ಘಟಕಗಳಿಗೆ ಸಂಬಂಧಿಸಿದ ಸಾಮಾನ್ಯ ನಿಯಮಗಳು: (೧) ಪರಿಷತ್ತಿನ ವಿವಿಧ ಕಾರ್ಯಕಾರಿ ಸಮಿತಿಗಳ ರಚನೆಗೆ ಸಂಬಂಧಿಸಿದ ನಿಯಮಗಳ ಹೊರತಾಗಿ ನೇಮಕ ಮಾಡಿಕೊಂಡ ಸದಸ್ಯರ ಸ್ಥಾನ ಸೃಷ್ಟಿಸಿಕೊಂಡ ಪದಾಧಿಕಾರಿ ಸ್ಥಾನ ಅಸಿಂಧು: (ಅ) ಕೇಂದ್ರ ಪರಿಷತ್ತು, (ಆ) ಜಿಲ್ಲಾ ಘಟಕ, (ಇ) ತಾಲ್ಲೂಕು ಮತ್ತು ಕ್ಷೇತ್ರ ಘಟಕ, (ಈ) ಹೋಬಳಿ ಘಟಕ, (ಉ) ಗಡಿನಾಡು/ರಾಜ್ಯ ಘಟಕ ಹಾಗೂ (ಊ) ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳ ಕಾರ್ಯಕಾರಿ ಸಮಿತಿಗಳು ಅನುಕ್ರಮವಾಗಿ ನಿಯಮ ೯(೨); ೧೨(೧); ೧೩(೧); ೧೪(೨); ೧೫(೨) ಮತ್ತು ೧೮(೧) ಇವುಗಳ ಅಡಿಯಲ್ಲಿ ಅಸ್ತಿತ್ವಕ್ಕೆ ಬರಲಿದ್ದು, ಅವುಗಳ ಪದಾಧಿಕಾರಿಗಳ ಹಾಗೂ ಸದಸ್ಯರ ವಿವರಗಳನ್ನು ಆಯಾ ನಿಯಮಗಳಲ್ಲಿ ಕೊಡಲಾಗಿದೆ. ಈ ನಿಯಮಗಳಿಗೆ ಹೊರತಾಗಿ ಯಾವುದೇ ಕಾರ್ಯಕಾರಿ ಸಮಿತಿಯಲ್ಲಿ, ಯಾವುದೇ ವರ್ಗದ ಸದಸ್ಯರನ್ನು ನೇಮಕ ಮಾಡಿಕೊಳ್ಳುವ ಅಥವಾ ಯಾವುದೇ ಪದಾಧಿಕಾರಿ ಸ್ಥಾನವನ್ನು ಸೃಷ್ಟಿಸಿಕೊಳ್ಳುವ ಅಧಿಕಾರ ಕೇಂದ್ರ ಪರಿಷತ್ತಿನ ಮತ್ತು ಆಯಾ ಘಟಕದ ಅಧ್ಯಕ್ಷರಿಗೆ ಇರತಕ್ಕದ್ದಲ್ಲ. ಅಂತಹ ಸದಸ್ಯತ್ವ / ಸ್ಥಾನ ನಿಯಮ ಬಾಹಿರವೆಂದು ಪರಿಗಣಿಸಲ್ಪಟ್ಟು, ಅಸಿಂಧುವಾಗತಕ್ಕದ್ದು. ನಿಯಮಬಾಹಿರವಾಗಿ ಸ್ಥಾನವನ್ನು ಸೃಷ್ಟಿಸಿದವರ / ಸದಸ್ಯರನ್ನು ನೇಮಕ ಮಾಡಿದವರ ವಿರುದ್ಧ ಕಾನೂನು ಕ್ರಮಕೈಗೊಳ್ಳತಕ್ಕದ್ದು. |
| (೩) ಜಿಲ್ಲಾ, ತಾಲ್ಲೂಕು/ಕ್ಷೇತ್ರ, ಹೋಬಳಿ ಮತ್ತು ಗಡಿ ನಾಡು/ರಾಜ್ಯ ಕಾರ್ಯಕಾರಿ ಸಮಿತಿ ರಚನೆ ಮತ್ತು ಪ್ರಕಟಣೆಗೆ ಕೇಂದ್ರ ಪರಿಷತ್ತಿನ ಅಧ್ಯಕ್ಷರ ಅನುಮೋದನೆ : | (೩) ಜಿಲ್ಲಾ, ತಾಲ್ಲೂಕು/ಕ್ಷೇತ್ರ, ಹೋಬಳಿ ಮತ್ತು ಗಡಿ ನಾಡು/ರಾಜ್ಯ ಕಾರ್ಯಕಾರಿ ಸಮಿತಿ ರಚನೆ ಮತ್ತು ಪ್ರಕಟಣೆಗೆ ಕೇಂದ್ರ ಪರಿಷತ್ತಿನ ಅಧ್ಯಕ್ಷರ ಅನುಮೋದನೆ : |
| (ಉ) ಗಡಿ ನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ [ಮತ್ತು ಹೊರದೇಶ] ಇವುಗಳ ಘಟಕಗಳ ಅಧ್ಯಕ್ಷರು ನೇರವಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರ ಪೂರ್ವಾನುಮತಿ ಪಡೆದ ನಂತರವೇ, ತಮ್ಮ ಘಟಕದ ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿಯನ್ನು ಪ್ರಕಟಿಸತಕ್ಕದ್ದು. | (ಉ) ಗಡಿ ನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಇವುಗಳ ಘಟಕಗಳ ಅಧ್ಯಕ್ಷರು ನೇರವಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರ ಪೂರ್ವಾನುಮತಿ ಪಡೆದ ನಂತರವೇ, ತಮ್ಮ ಘಟಕದ ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿಯನ್ನು ಪ್ರಕಟಿಸತಕ್ಕದ್ದು. |
| *ನಿಯಮ ೩೨(೩)(ಊ)*<br>*ಉಪನಿಯಮ ಹೊಸ ಸೇರ್ಪಡೆ* | *(ಊ)* * ನಿಬಂಧನೆ ಸಂಖ್ಯೆ ೩೨(೩)ರ (ಅ) ಮತ್ತು (ಆ)ರ ಅನ್ವಯ ಆಯಾ ಘಟಕದ ಅಧ್ಯಕ್ಷರು ತಮ್ಮ ಘಟಕದ ಕಾರ್ಯಕಾರಿ ಸಮಿತಿಗೆ ನಾಮನಿರ್ದೇಶಿತ ಸದಸ್ಯರುಗಳ ಪಟ್ಟಿಯನ್ನು, ಕೇಂದ್ರ ಪರಿಷತ್ತಿನ ಅಧ್ಯಕ್ಷರ ಅನುಮೋದನೆಗಾಗಿ ಸಲ್ಲಿಸುವಲ್ಲಿ ವಿಫಲರಾದ ಪಕ್ಷದಲ್ಲಿ, ಕೇಂದ್ರ ಪರಿಷತ್ತಿನ ಅಧ್ಯಕ್ಷರೇ ಸ್ವಯಂ ನಿರ್ಣಯ ಕೈಗೊಂಡು, ಅಂತಹ ಘಟಕದ ಕಾರ್ಯಕಾರಿ ಸಮಿತಿಗೆ ಸದಸ್ಯರನ್ನು, ನಾಮನಿರ್ದೇಶನ ಮಾಡುವ ಮೂಲಕ ಸಮಿತಿಯನ್ನು, ಪೂರ್ಣಗೊಳಿಸುವ ಅಧಿಕಾರವನ್ನು, ಹೊಂದಿರತಕ್ಕದ್ದು.* |

೧) ನಿಯಮ ಸಂಖ್ಯೆ ೩೨(೧) ರಲ್ಲಿಯ ಹಾಗೂ ೩೨(೩)(ಉ)ರಲ್ಲಿಯ 'ಮತ್ತು ಹೊರದೇಶ' ಎಂಬ ಪದಗಳನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಕೈಬಿಟ್ಟು, ೩೨(೩)(ಊ) ಅನ್ನು ಹೊಸದಾಗಿ ಸೇರಿಸಲಾಗಿದೆ.

| ಹಾಲಿ ಇರುವ ನಿಯಮ–ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ |
|---|---|
| (೪) ಆಯಾ ಘಟಕಗಳ ಕಾರ್ಯಕ್ರಮಗಳ ವರದಿಯನ್ನು ಸಲ್ಲಿಸುವ ಬಗ್ಗೆ : ಪರಿಷತ್ತಿನ ವಿವಿಧ ಘಟಕಗಳು ಆಗಾಗ್ಗೆ ಜರುಗಿಸಿದ ಕಾರ್ಯಕ್ರಮಗಳ ವಿವರಗಳನ್ನು ಪ್ರತಿ ಕಾರ್ಯಕ್ರಮದ ನಂತರದ ಹತ್ತು ದಿನಗೊಳಗಾಗಿ ವಿವರವಾದ ವರದಿಯನ್ನು (ಅ) ಜಿಲ್ಲಾ ಘಟಕದ ಅಧ್ಯಕ್ಷರು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ; (ಆ) ತಾಲ್ಲೂಕು / ಕ್ಷೇತ್ರದ ಘಟಕದ ಅಧ್ಯಕ್ಷರು ಆಯಾ ಜಿಲ್ಲಾ ಘಟಕದ ಅಧ್ಯಕ್ಷರ ಮೂಲಕ ಕೇಂದ್ರ ಪರಿಷತ್ತು ಅಧ್ಯಕ್ಷರಿಗೆ; (ಇ) ಹೋಬಳಿ ಘಟಕದ ಅಧ್ಯಕ್ಷರು ತಮ್ಮ ತಾಲ್ಲೂಕು ಘಟಕದ ಅಧ್ಯಕ್ಷರ ಮೂಲಕ ತಮ್ಮ ಜಿಲ್ಲಾ ಘಟಕದ ಅಧ್ಯಕ್ಷರಿಗೆ; ಹಾಗೂ (ಈ) ಪ್ರತಿ ಗಡಿನಾಡು/ರಾಜ್ಯ ಘಟಕ, ಹೊರರಾಜ್ಯ ಘಟಕ, ಕೇಂದ್ರಾಡಳಿತ ಪ್ರದೇಶ [ಘಟಕ ಮತ್ತು ಹೊರದೇಶ] ಘಟಕಗಳ ಅಧ್ಯಕ್ಷರುಗಳು ನೇರವಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಸಲ್ಲಿಸತಕ್ಕದ್ದು. | (೪) ಆಯಾ ಘಟಕಗಳ ಕಾರ್ಯಕ್ರಮಗಳ ವರದಿಯನ್ನು ಸಲ್ಲಿಸುವ ಬಗ್ಗೆ : ಪರಿಷತ್ತಿನ ವಿವಿಧ ಘಟಕಗಳು ಆಗಾಗ್ಗೆ ಜರುಗಿಸಿದ ಕಾರ್ಯಕ್ರಮಗಳ ವಿವರಗಳನ್ನು ಪ್ರತಿ ಕಾರ್ಯಕ್ರಮದ ನಂತರದ ಹತ್ತು ದಿನಗೊಳಗಾಗಿ ವಿವರವಾದ ವರದಿಯನ್ನು (ಅ) ಜಿಲ್ಲಾ ಘಟಕದ ಅಧ್ಯಕ್ಷರು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ; (ಆ) ತಾಲ್ಲೂಕು / ಕ್ಷೇತ್ರದ ಘಟಕದ ಅಧ್ಯಕ್ಷರು ಆಯಾ ಜಿಲ್ಲಾ ಘಟಕದ ಅಧ್ಯಕ್ಷರ ಮೂಲಕ ಕೇಂದ್ರ ಪರಿಷತ್ತು ಅಧ್ಯಕ್ಷರಿಗೆ; (ಇ) ಹೋಬಳಿ ಘಟಕದ ಅಧ್ಯಕ್ಷರು ತಮ್ಮ ತಾಲ್ಲೂಕು ಘಟಕದ ಅಧ್ಯಕ್ಷರ ಮೂಲಕ ತಮ್ಮ ಜಿಲ್ಲಾ ಘಟಕದ ಅಧ್ಯಕ್ಷರಿಗೆ; ಹಾಗೂ (ಈ) ಪ್ರತಿ ಗಡಿನಾಡು/ರಾಜ್ಯ ಘಟಕ, ಹೊರರಾಜ್ಯ ಘಟಕ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳ ಅಧ್ಯಕ್ಷರುಗಳು ನೇರವಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಸಲ್ಲಿಸತಕ್ಕದ್ದು. |
| (೫) ಪರಿಷತ್ತಿನ ವಿವಿಧ ಘಟಕಗಳಿಂದ ಲೆಕ್ಕಪತ್ರಗಳ ತ್ರೈಮಾಸಿಕ ಮತ್ತು ವಾರ್ಷಿಕ ವರದಿ ಸಲ್ಲಿಕೆ : ಪ್ರತಿ ವರ್ಷದ ಏಪ್ರಿಲ್ ತಿಂಗಳ ಒಂದನೆಯ ತಾರಿಖಿನಿಂದ ಪ್ರತಿ ಮೂರು ತಿಂಗಳಿಗೊಮ್ಮೆ ತ್ರೈಮಾಸಿಕವಾಗಿ ಹಾಗೂ ಹಣಕಾಸು ವರ್ಷಾಂತ್ಯದ ನಂತರ ಆಯಾ ವರ್ಷದ ಮೇ ತಿಂಗಳ ಕೊನೆಯೊಳಗಾಗಿ ಹಿಂದಿನ ವರ್ಷದ ಅವಧಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಸನ್ನದು ಲೆಕ್ಕಿಗರಿಂದ (ಚಾರ್ಟರ್ಡ್ ಅಕೌಂಟೆಂಟ್ ಅವರಿಂದ) ಲೆಕ್ಕಪರಿಶೋಧನೆ ಮಾಡಿಸಿ ಲೆಕ್ಕಪರಿಶೋಧಕರ ವರದಿಯೊಂದಿಗೆ ಹಣಕಾಸು ತಃಖ್ತೆ, ಮೂಲ ರಸೀತಿ, ಓಚರ್‌ಗಳನ್ನು ಲಗತ್ತಿಸಿದ ವಿವರಗಳನ್ನು – (ಅ) ಜಿಲ್ಲಾ ಘಟಕದ ಅಧ್ಯಕ್ಷರು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ, (ಆ) ತಾಲ್ಲೂಕು / ಕ್ಷೇತ್ರ ಘಟಕದ ಅಧ್ಯಕ್ಷರು ಜಿಲ್ಲಾ ಘಟಕದ ಅಧ್ಯಕ್ಷರ ಮೂಲಕ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ; (ಇ) ಹೋಬಳಿ ಘಟಕದ ಅಧ್ಯಕ್ಷರು ಆಯಾ ತಾಲ್ಲೂಕು ಘಟಕದ ಅಧ್ಯಕ್ಷರ ಮೂಲಕ ಜಿಲ್ಲಾ ಘಟಕ ಅಧ್ಯಕ್ಷರಿಗೆ ಹಾಗೂ (ಈ) ಗಡಿ ನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ [ಘಟಕ ಮತ್ತು ಹೊರದೇಶ]ಘಟಕಗಳ ಅಧ್ಯಕ್ಷರುಗಳು ನೇರವಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ತಲುಪಿಸತಕ್ಕದ್ದು. | (೫) ಪರಿಷತ್ತಿನ ವಿವಿಧ ಘಟಕಗಳಿಂದ ಲೆಕ್ಕಪತ್ರಗಳ ತ್ರೈಮಾಸಿಕ ಮತ್ತು ವಾರ್ಷಿಕ ವರದಿ ಸಲ್ಲಿಕೆ : ಪ್ರತಿ ವರ್ಷದ ಏಪ್ರಿಲ್ ತಿಂಗಳ ಒಂದನೆಯ ತಾರಿಖಿನಿಂದ ಪ್ರತಿ ಮೂರು ತಿಂಗಳಿಗೊಮ್ಮೆ ತ್ರೈಮಾಸಿಕವಾಗಿ ಹಾಗೂ ಹಣಕಾಸು ವರ್ಷಾಂತ್ಯದ ನಂತರ ಆಯಾ ವರ್ಷದ ಮೇ ತಿಂಗಳ ಕೊನೆಯೊಳಗಾಗಿ ಹಿಂದಿನ ವರ್ಷದ ಅವಧಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಸನ್ನದು ಲೆಕ್ಕಿಗರಿಂದ (ಚಾರ್ಟರ್ಡ್ ಅಕೌಂಟೆಂಟ್ ಅವರಿಂದ) ಲೆಕ್ಕಪರಿಶೋಧನೆ ಮಾಡಿಸಿ ಲೆಕ್ಕಪರಿಶೋಧಕರ ವರದಿಯೊಂದಿಗೆ ಹಣಕಾಸು ತಃಖ್ತೆ, ಮೂಲ ರಸೀತಿ, ಓಚರ್‌ಗಳನ್ನು ಲಗತ್ತಿಸಿದ ವಿವರಗಳನ್ನು – (ಅ) ಜಿಲ್ಲಾ ಘಟಕದ ಅಧ್ಯಕ್ಷರು ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ, (ಆ) ತಾಲ್ಲೂಕು / ಕ್ಷೇತ್ರ ಘಟಕದ ಅಧ್ಯಕ್ಷರು ಜಿಲ್ಲಾ ಘಟಕದ ಅಧ್ಯಕ್ಷರ ಮೂಲಕ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ; (ಇ) ಹೋಬಳಿ ಘಟಕದ ಅಧ್ಯಕ್ಷರು ಆಯಾ ತಾಲ್ಲೂಕು ಘಟಕದ ಅಧ್ಯಕ್ಷರ ಮೂಲಕ ಜಿಲ್ಲಾ ಘಟಕ ಅಧ್ಯಕ್ಷರಿಗೆ ಹಾಗೂ (ಈ) ಗಡಿ ನಾಡು/ರಾಜ್ಯ, ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳ ಅಧ್ಯಕ್ಷರುಗಳು ನೇರವಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ತಲುಪಿಸತಕ್ಕದ್ದು. |
| (೭) ನಾಮ ನಿರ್ದೇಶನಗೊಳ್ಳುವವರು ಆಯಾ ಘಟಕದ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ ಮತದಾರರಾಗಿರ ತಕ್ಕದ್ದು : ಯಾವುದೇ ಜಿಲ್ಲೆ, ತಾಲ್ಲೂಕು / ಕ್ಷೇತ್ರ, ಹೋಬಳಿ, ಗಡಿ ನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಮತ್ತು ಹೊರದೇಶ ಘಟಕಗಳ ಅಧ್ಯಕ್ಷರ, ಕಾರ್ಯಕಾರಿ ಸಮಿತಿಯ ಸದಸ್ಯ ಅಥವಾ ಪದಾಧಿಕಾರಿಗಳ ಸ್ಥಾನಕ್ಕೆ ನಾಮನಿರ್ದೇಶನಗೊಳ್ಳಲು ಅರ್ಹರಾಗಬೇಕಾದ ವ್ಯಕ್ತಿಗಳು ಆಯಾ ಜಿಲ್ಲೆ, ತಾಲ್ಲೂಕು / ಕ್ಷೇತ್ರ, ಹೋಬಳಿ, ಗಡಿ ನಾಡು/ ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ [ಮತ್ತು ಹೊರದೇಶ] ಘಟಕಗಳ ಭೌಗೋಳಿಕ ಕ್ಷೇತ್ರದಲ್ಲಿ ವಾಸಿಸುವ ಪರಿಷತ್ತಿನ ಅರ್ಹ ಮತದಾರರಾಗಿರತಕ್ಕದ್ದು. | (೭) ನಾಮ ನಿರ್ದೇಶನಗೊಳ್ಳುವವರು ಆಯಾ ಘಟಕದ ಕಾರ್ಯಕ್ಷೇತ್ರ ವ್ಯಾಪ್ತಿಯಲ್ಲಿ ಮತದಾರರಾಗಿರ ತಕ್ಕದ್ದು : ಯಾವುದೇ ಜಿಲ್ಲೆ, ತಾಲ್ಲೂಕು / ಕ್ಷೇತ್ರ, ಹೋಬಳಿ, ಗಡಿ ನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ ಘಟಕಗಳ* ಅಧ್ಯಕ್ಷರ, ಕಾರ್ಯಕಾರಿ ಸಮಿತಿಯ ಸದಸ್ಯ ಅಥವಾ ಪದಾಧಿಕಾರಿಗಳ ಸ್ಥಾನಕ್ಕೆ ನಾಮನಿರ್ದೇಶನಗೊಳ್ಳಲು ಅರ್ಹರಾಗಬೇಕಾದ ವ್ಯಕ್ತಿಗಳು ಆಯಾ ಜಿಲ್ಲೆ, ತಾಲ್ಲೂಕು / ಕ್ಷೇತ್ರ, ಹೋಬಳಿ, ಗಡಿ ನಾಡು/ರಾಜ್ಯ, ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳ ಭೌಗೋಳಿಕ ಕ್ಷೇತ್ರದಲ್ಲಿ ವಾಸಿಸುವ ಪರಿಷತ್ತಿನ ಅರ್ಹ ಮತದಾರರಾಗಿರತಕ್ಕದ್ದು. |

೧) ನಿಯಮ ಸಂಖ್ಯೆ ೩.೨ರ (೪), (೫) ಮತ್ತು (೭) ರಲ್ಲಿಯ 'ಘಟಕ ಮತ್ತು ಹೊರದೇಶ' ಎಂಬ ಪದಗಳನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಕೈಬಿಡಲಾಗಿದೆ.

| ಹಾಲಿ ಇರುವ ನಿಯಮ–ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ |
|---|---|
| **(೮) ಪರಿಷತ್ತಿನ ವಿವಿಧ ಘಟಕಗಳ ಕೇಂದ್ರ ಕಛೇರಿಯ ಸ್ಥಾನ :**<br>**(ಆ) ಗಡಿ ನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ [ಹಾಗೂ ಹೊರದೇಶಗಳ] ಘಟಕಗಳಿಗೆ ಸಂಬಂಧಿಸಿದಂತೆ ಆಯಾ ಘಟಕದ ಕೇಂದ್ರ ಕಛೇರಿಯ ಸ್ಥಳವನ್ನು ನಿರ್ಣಯಿಸುವುದು ಆಯಾ ಘಟಕದ ಕಾರ್ಯಕಾರಿ ಸಮಿತಿಯ ವಿವೇಚನೆಗೆ ಬಿಡಲಾಗಿದೆ.** | **(೮) ಪರಿಷತ್ತಿನ ವಿವಿಧ ಘಟಕಗಳ ಕೇಂದ್ರ ಕಛೇರಿಯ ಸ್ಥಾನ :**<br>**(ಆ) ಗಡಿ ನಾಡು/ರಾಜ್ಯ, ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳಿಗೆ ಸಂಬಂಧಿಸಿದಂತೆ ಆಯಾ ಘಟಕದ ಕೇಂದ್ರ ಕಛೇರಿಯ ಸ್ಥಳವನ್ನು ನಿರ್ಣಯಿಸುವುದು ಆಯಾ ಘಟಕದ ಕಾರ್ಯಕಾರಿ ಸಮಿತಿಯ ವಿವೇಚನೆಗೆ ಬಿಡಲಾಗಿದೆ.** |
| **೩೩. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ :**<br>(೨) ಯಾವುದೇ ಒಂದು ಸ್ಥಳದಲ್ಲಿ ಸಮ್ಮೇಳನ ಏರ್ಪಡಿಸಬೇಕಾದಾಗ ಕೇಂದ್ರ ಪರಿಷತ್ತು ಆಯಾ ಜಿಲ್ಲಾ ಘಟಕದ ಜವಾಬ್ದಾರಿಯಲ್ಲಿ **ಆಯಾ ಜಿಲ್ಲಾಡಳಿತದ ಸಹಕಾರವನ್ನು ಪಡೆಯತಕ್ಕದ್ದು.**<br>*ನಿಯಮ ೩೩(೨)(ಅ) ಹೊಸ ಸೇರ್ಪಡೆ* | **೩೩. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ :**<br>(೨) ಯಾವುದೇ ಒಂದು ಸ್ಥಳದಲ್ಲಿ ಸಮ್ಮೇಳನ ಏರ್ಪಡಿಸಬೇಕಾದಾಗ ಕೇಂದ್ರ ಪರಿಷತ್ತು ಆಯಾ ಜಿಲ್ಲಾ ಘಟಕದ ಜವಾಬ್ದಾರಿಯಲ್ಲಿ **ಆಯಾ ಜಿಲ್ಲಾಡಳಿತದ ಸಹಕಾರವನ್ನು ಪಡೆಯತಕ್ಕದ್ದು.**<br>***(ಅ)* ಸಮ್ಮೇಳನ ಜರುಗಲಿರುವ ಜಿಲ್ಲೆಯ ಚುನಾಯಿತ ಅಧ್ಯಕ್ಷರ ಸ್ಥಾನ ಯಾವುದೇ ಕಾರಣದಿಂದಾಗಿ ತೆರವಾಗಿದ್ದಲ್ಲಿ ಅಥವಾ ಜಿಲ್ಲಾಧ್ಯಕ್ಷರು ಆರೋಗ್ಯ ಸಮಸ್ಯೆಯ ಕಾರಣದಿಂದಾಗಿ ಅಥವಾ ಮತ್ತಾವುದೇ ಕಾರಣದಿಂದಾಗಿ ಸಮ್ಮೇಳನದ ಪೂರ್ವಸಿದ್ಧತೆಗಳನ್ನು ಒಳಗೊಂಡಂತೆ ಎಲ್ಲ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಮರ್ಥರಾಗಿಲ್ಲದ ಪಕ್ಷದಲ್ಲಿ, ಅವರು ನಿಯಮಗಳನುಸಾರ ನಿರ್ವಹಿಸಬೇಕಾದ ಎಲ್ಲ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲಿಕ್ಕಾಗಿ ಕೇಂದ್ರ ಪರಿಷತ್ತಿನ ಅಧ್ಯಕ್ಷರು ಸಮಿತಿಯೊಂದನ್ನು ರಚಿಸುವುದು, ಆ ಸಮಿತಿಯು ಅವರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸತಕ್ಕದ್ದು.* |
| **(೩) ಗಡಿ ನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ, [ಹೊರದೇಶ] ಘಟಕಗಳಲ್ಲಿ ಸಮ್ಮೇಳನವನ್ನು ಆಯಾ ಘಟಕಗಳ ಸಹಕಾರದೊಂದಿಗೆ** ಕೇಂದ್ರ ಪರಿಷತ್ತು ನೇರವಾಗಿ ಏರ್ಪಡಿಸತಕ್ಕದ್ದು.<br>*ನಿಯಮ ೩೩(೩)(ಅ) ಹೊಸ ಸೇರ್ಪಡೆ* | **(೩) ಗಡಿ ನಾಡು/ರಾಜ್ಯ, ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯಾ ಘಟಕಗಳ ಸಹಕಾರದೊಂದಿಗೆ** ಕೇಂದ್ರ ಪರಿಷತ್ತು ನೇರವಾಗಿ ಏರ್ಪಡಿಸತಕ್ಕದ್ದು.<br>***(ಅ)* ಆಯಾ ದೇಶಗಳಲ್ಲಿರುವ ಪರಿಷತ್ತಿನ ಅಂಗಸಂಸ್ಥೆಗಳ ಸಹಾಯ–ಸಹಕಾರದೊಂದಿಗೆ ಪರಿಷತ್ತು ಅಂತಾರಾಷ್ಟ್ರೀಯ ಕನ್ನಡ ಸಮ್ಮೇಳನಗಳನ್ನು / ಕಾರ್ಯಕ್ರಮಗಳನ್ನು ಏರ್ಪಡಿಸತಕ್ಕದ್ದು.* |

೧) ನಿಯಮ ಸಂಖ್ಯೆ ೩೨(೮)ರ (ಆ) ರಲ್ಲಿಯ 'ಹಾಗೂ ಹೊರದೇಶಗಳ' ಎಂಬ ಪದಗಳನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಕೈಬಿಡಲಾಗಿದೆ.

೨) ನಿಯಮ ಸಂಖ್ಯೆ ೩೩(೨)ರಲ್ಲಿ (ಅ) ಅನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಹೊಸದಾಗಿ ಸೇರಿಸಲಾಗಿದೆ.

೩) ನಿಯಮ ಸಂಖ್ಯೆ ೩೩(೩)ರಲ್ಲಿಯ 'ಹೊರದೇಶ' ಎಂಬ ಪದವನ್ನು ಕೈಬಿಟ್ಟು, ೩೩(೩)ರಲ್ಲಿ (ಅ) ಅನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಹೊಸದಾಗಿ ಸೇರಿಸಲಾಗಿದೆ.

| ಹಾಲಿ ಇರುವ ನಿಯಮ–ನಿಬಂಧನೆಗಳು | ಪ್ರಸ್ತಾಪಿತ ತಿದ್ದುಪಡಿ |
| --- | --- |
| *ನಿಯಮ ೩೩(೪)(ಅ) ಹೊಸ ಸೇರ್ಪಡೆ* | *(೪)(ಅ)* [*] *ಕೇಂದ್ರ ಪರಿಷತ್ತಿನ ಅಧ್ಯಕ್ಷರು ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರಾಗಿ ಕಾರ್ಯನಿರ್ವಹಿಸತಕ್ಕದ್ದು. ಅವರನ್ನು, ಅಥವಾ ಅವರು ನಿಯೋಜಿಸುವ ಪ್ರತಿನಿಧಿಯೊಬ್ಬರನ್ನು, ಹಾಗೂ ಆತಿಥ್ಯ ವಹಿಸಿದ ಜಿಲ್ಲಾ ಘಟಕದ ಅಧ್ಯಕ್ಷರನ್ನು, ಸಮ್ಮೇಳನದ ಎಲ್ಲ ಸಮಿತಿ / ಉಪಸಮಿತಿ ಸಭೆಗಳಿಗೆ ಕಡ್ಡಾಯವಾಗಿ ಆಹ್ವಾನಿಸತಕ್ಕದ್ದು. ಇಂತಹ ಸಭೆಗಳಲ್ಲಿ ಕೈಗೊಂಡ ನಿರ್ಣಯಗಳ ನಡಾವಳಿಗಳನ್ನು, ಆಯಾ ಸಭೆ ಜರುಗಿದ ಏಳು ದಿನಗಳೊಳಗಾಗಿ ಕೇಂದ್ರ ಪರಿಷತ್ತಿನ ಅವಗಾಹನೆಗಾಗಿ ಕಡ್ಡಾಯವಾಗಿ ಕಳುಹಿಸತಕ್ಕದ್ದು.* |
| (೬) ಸಮ್ಮೇಳನ ನಡೆಸಲು ಕೈಗೊಳ್ಳಬೇಕಾದ ಯುಕ್ತ ಕ್ರಮಗಳ ಬಗ್ಗೆ ಮಾರ್ಗದರ್ಶಿ ಸೂಚನೆಗಳನ್ನು ಹೊರಡಿಸುವ ಅಧಿಕಾರವನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ಹೊಂದಿರುತ್ತಾರೆ. | (೬) ಸಮ್ಮೇಳನ ನಡೆಸಲು ಕೈಗೊಳ್ಳಬೇಕಾದ ಯುಕ್ತ ಕ್ರಮಗಳ ಬಗ್ಗೆ ಮಾರ್ಗದರ್ಶಿ ಸೂಚನೆಗಳನ್ನು ಹೊರಡಿಸುವ *[ಹಾಗೂ ಸಮ್ಮೇಳನದ ದಿನಾಂಕಗಳನ್ನು, ನಿಗದಿಪಡಿಸಿ, ಪ್ರಕಟಿಸುವ]* ಅಧಿಕಾರವನ್ನು ಕೇಂದ್ರ ಪರಿಷತ್ತಿನ ಅಧ್ಯಕ್ಷರು ಹೊಂದಿರುತ್ತಾರೆ. |
| (೯) ಸಮ್ಮೇಳನದ ರೂಪುರೇಷೆಗಳನ್ನು ಸಿದ್ಧಪಡಿಸಲು, ಸಮ್ಮೇಳನದಲ್ಲಿ ಚರ್ಚೆಗೆ ಬರುವ ವಿಷಯಗಳು, ಗೋಷ್ಠಿಗಳು, ಸಂವಾದ ಮತ್ತು ಸಂಪನ್ಮೂಲ ವ್ಯಕ್ತಿಗಳ ಆಯ್ಕೆಗಾಗಿ ಸಲಹಾ ಸಮಿತಿ ರಚಿಸುವುದಕ್ಕೆ, ಸಮ್ಮೇಳನಕ್ಕೆ ಆಹ್ವಾನಿಸಲಾಗುವ ಗಣ್ಯರ ಆಯ್ಕೆಗೆ ಹಾಗೂ ಸಮ್ಮೇಳನದ ಇತರ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸೂಕ್ತ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರತಕ್ಕದ್ದು. ಇದೇ ನಿಯಾಮವಳಿ ಜಿಲ್ಲೆ, ತಾಲ್ಲೂಕು, ಹೋಬಳಿ, ಗಡಿನಾಡು/ರಾಜ್ಯ, ಹೊರರಾಜ್ಯ, ಕೇಂದ್ರಾಡಳಿತ ಪ್ರದೇಶ, [ಹೊರದೇಶಗಳ ಘಟಕಗಳ] ಸಮ್ಮೇಳನಗಳಿಗೂ ಅನ್ವಯವಾಗುವುದು. | (೯) ಸಮ್ಮೇಳನದ ರೂಪುರೇಷೆಗಳನ್ನು ಸಿದ್ಧಪಡಿಸಲು, ಸಮ್ಮೇಳನದಲ್ಲಿ ಚರ್ಚೆಗೆ ಬರುವ ವಿಷಯಗಳು, ಗೋಷ್ಠಿಗಳು, ಸಂವಾದ ಮತ್ತು ಸಂಪನ್ಮೂಲ ವ್ಯಕ್ತಿಗಳ ಆಯ್ಕೆಗಾಗಿ ಸಲಹಾ ಸಮಿತಿ ರಚಿಸುವುದಕ್ಕೆ, ಸಮ್ಮೇಳನಕ್ಕೆ ಆಹ್ವಾನಿಸಲಾಗುವ ಗಣ್ಯರ ಆಯ್ಕೆಗೆ ಹಾಗೂ ಸಮ್ಮೇಳನದ ಇತರ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸೂಕ್ತ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಕೇಂದ್ರ ಪರಿಷತ್ತಿನ ಅಧ್ಯಕ್ಷರಿಗೆ ಇರತಕ್ಕದ್ದು. ಇದೇ ನಿಯಾಮವಳಿ ಜಿಲ್ಲೆ, ತಾಲ್ಲೂಕು, ಹೋಬಳಿ, ಗಡಿನಾಡು/ರಾಜ್ಯ, ಹೊರರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಘಟಕಗಳ ಸಮ್ಮೇಳನಗಳಿಗೂ ಅನ್ವಯವಾಗುವುದು. |
| * * * * * | * * * * * |

೧) ನಿಯಮ ಸಂಖ್ಯೆ ೩೩(೪)ರಲ್ಲಿ (ಅ) ಅನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಹೊಸದಾಗಿ ಸೇರಿಸಲಾಗಿದೆ.

೨) ನಿಯಮ ಸಂಖ್ಯೆ ೩೩(೬)ರಲ್ಲಿ 'ಹಾಗೂ ಸಮ್ಮೇಳನದ ದಿನಾಂಕಗಳನ್ನು ನಿಗದಿಪಡಿಸಿ, ಪ್ರಕಟಿಸುವ' ಎಂಬ ಪದಗಳನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಸೇರಿಸಲಾಗಿದೆ.

೩) ನಿಯಮ ಸಂಖ್ಯೆ ೩೩(೯)ರಲ್ಲಿಯ 'ಹೊರದೇಶಗಳ' ಎಂಬ ಪದವನ್ನು ೨೦೨೩ರ ಪ್ರಥಮ ತಿದ್ದುಪಡಿಯ ಮೂಲಕ ಕೈಬಿಡಲಾಗಿದೆ.